

ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ನವೆಂಬರ್ 2014 ಮಾಸ ಪತ್ರಿಕೆ


ಸಂಪುಟ : 37
ಸಂಚಿಕೆ : 2
ಪುಟ : 12
ಬೆಲೆ : ₹ 5/-





## ಸಾಧಕರನ್ನು ಸ್ಮರಿಸೋಣ

ಅ. ಗುರುನಾನಕ್
ಆ. ವಾಸುದೇವ ಬಲವಂತ ಫಡಕೆ
ಇ. ಸುಬ್ರಹ್ಮಣ್ಯ ಭಾರತಿ
ಈ. ಕುವೆಂಪು




ಶಿಕ್ಷಣದಲ್ಲಿ ಭಾರತೀಯತೆ ವಿಚಾರಸಂಕಿರಣ 3
4 ನೂತನ ಕೇಂದ್ರೀಯ ಆಡಳಿತ ಮಂಡಳಿ
ಹೀಗಿದ್ದರು ವಲ್ಲಭಭಾಯಿ ಪಟೇಲ್ 6
7 ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಹಿರಿದು

A Journal of Karnataka State Secondary Teachers' Association

# ಸಂಪಾದಕೀಯ

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮ ಧರ್ಮಸ್ಯ ತದಾತ್ಮಾನಾಂ ಸೃಜಾಮ್ಯಹಮ್ ॥" 'ಯಾವಾಗ ಧರ್ಮದ ಅವನತಿಯಾಗುವುದೋ, ಅಧರ್ಮದ ಉನ್ನತಿಯಾಗುವುದೋ, ಆಗ ನಾನು ಅವತಾರ ಮಾಡುತ್ತೇನೆ.' ಇದು ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯಲ್ಲಿ ನೀಡಿದ ಭರವಸೆ. ಈಗ ನಾವು ಸಮಾಜದಲ್ಲಿ ಹೆಚ್ಚಾಗಿ ಕಾಣುತ್ತಿರುವುದು ಅನ್ಯಾಯ, ಅತ್ಯಾಚಾರ, ಭ್ರಷ್ಟಾಚಾರ, ಕೊಲೆ, ದರೋಡೆ.... ಅದರಲ್ಲೂ ವಿದ್ಯೆಯ ದೇಗುಲಗಳಾದ ಶಾಲೆಗಳಲ್ಲೇ ಹಸುಗೂಸುಗಳ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಇಂತಹ ಅಮಾನವೀಯ, ಪೈಶಾಚಿಕ ಭಾವನೆಗಳನ್ನು ಮನುಷ್ಯರ ಮನದಿಂದ ಹೋಗಲಾಡಿಸಲು ಶ್ರೀಕೃಷ್ಣ ಪರಮಾತ್ಮನು ವ್ಯಕ್ತಿಯಾಗಿ ಅಥವ ಸಂಘಶಕ್ತಿಯ ರೂಪದಲ್ಲಿ ಅವತರಿಸಬೇಕಾದ ಸುಸಮಯ ಇದಲ್ಲವೇ? ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣವನ್ನು ನೀಡುವುದರೊಂದಿಗೆ ಶಿಕ್ಷಕರಿಗೂ ಮೌಲ್ಯ ಶಿಕ್ಷಣ ನೀಡುವುದರ ಬಗ್ಗೆ ಚಿಂತಿಸುವ ಅಗತ್ಯ ಇದೆಯಲ್ಲವೇ? ಭಗವದ್ಗೀತೆ ನಾವು ಜೀವನದಲ್ಲಿ ಅನುಸರಿಸಬೇಕಾದ ನಡೆ-ನುಡಿಗಳನ್ನು ಬೋಧಿಸುತ್ತದೆ. ಡಿಸೆಂಬರ್ 2 ಗೀತಾಜಯಂತಿ. ಈ ಸಂದರ್ಭದಲ್ಲಿ ಭಗವದ್ಗೀತೆಯ ಸಂದೇಶವನ್ನು ನೆನಪಿಸಿ ಕೊಳ್ಳುವುದು ಸೂಕ್ತ.

ದಾಸ ಶ್ರೇಷ್ಠರಲ್ಲಿ ಕನಕದಾಸರು ಪ್ರಮುಖರು. ಅವರ ಭಕ್ತಿಯ ಪರಾಕಾಷ್ಠೆಗೆ ಒಲಿದು ಉಡುಪಿಯ ಶ್ರೀಕೃಷ್ಣನೇ ಅವರಿದ್ದ ದಿಕ್ಕಿಗೆ ತಿರುಗಿ ನಿಂತು ದರ್ಶನ ನೀಡಿದ. ಕನಕದಾಸರು ಅನನ್ಯ ಭಕ್ತರಾದಂತೆಯೇ ತಮ್ಮ ಉದಾತ್ತ ಕೀರ್ತನೆಗಳ ಮೂಲಕ ಸಮಾಜಕ್ಕೆ ಶ್ರೇಷ್ಠ ವಿಚಾರಗಳ ಕೊಡುಗೆಯನ್ನು ನೀಡಿದ್ದಾರೆ. ಇಂತಹ ದಾಸಶ್ರೇಷ್ಠರ ಜಯಂತಿಯ ಸಂದರ್ಭದಲ್ಲಿ ಅವರ ವಿಚಾರಧಾರೆಗಳನ್ನು ಸ್ಮರಿಸಿ ಬದುಕನ್ನು ಹಸನು ಮಾಡಿಕೊಳ್ಳೋಣ.

ಭಾರತದ 'ಉಕ್ಕಿನ ಮನುಷ್ಯ' ಎಂದೇ ಖ್ಯಾತರಾದವರು ಸರ್ದಾರ್ ವಲ್ಲಭಭಾಯ್ ಪಟೇಲ್. ಅವರು ದೇಶದ ಮೊದಲ ಗೃಹ ಸಚಿವರೂ ಹೌದು. ಆದರೆ ಕ್ರಮೇಣ ಅವರು ಜನಮನದಿಂದ ದೂರವೇ ಉಳಿದುಬಿಟ್ಟರು. ಈಗ ಕೇಂದ್ರ ಸರ್ಕಾರ ಸರ್ದಾರ ಪಟೇಲರನ್ನು, ಅವರ ವಿಚಾರಧಾರೆಗಳನ್ನು ಮತ್ತೆ ಜನರಿಗೆ ನೆನಪಿಸುತ್ತಿರುವುದು ಸಂತೋಷದ ಸಂಗತಿ. ವಲ್ಲಭಭಾಯ್‌ರ ವಿಚಾರಧಾರೆಗಳು ದೇಶವನ್ನು ಮುನ್ನಡೆಸುವುದೆಂಬ ಸದಾಶಯ ನಮ್ಮದು.

ಒಂದು ದೇಶದ ಅಮೂಲ್ಯವಾದ ಆಸ್ತಿ ಎಂದರೆ 'ಶಕ್ತಿ'. ಶಕ್ತಿಯ ವಿಧಗಳು ಹಲವು. ಮಾನವ ಶಕ್ತಿಯೂ ಸೇರಿದಂತೆ ಎಲ್ಲ ಶಕ್ತಿಗಳ ಅಪವ್ಯಯವಾಗದಂತೆ ಸಂರಕ್ಷಿಸುವುದು ಅತ್ಯಗತ್ಯ. ಶಕ್ತಿಯ ಅಪವ್ಯಯ ದೇಶದ ಅಭಿವೃದ್ಧಿಗೆ ಮಾರಕ. ಆದ್ದರಿಂದ ಶಕ್ತಿಗಳ ಸದ್ಬಳಕೆಯ ಬಗ್ಗೆ, ಮಿತ ಬಳಕೆಯ ಬಗ್ಗೆ ಜನಜಾಗೃತಿ ಮೂಡಿಸಬೇಕು. ಶಿಕ್ಷಕರು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಈ ಬಗ್ಗೆ ತಿಳುವಳಿಕೆ ನೀಡುವುದರ ಮೂಲಕ ಸಮಾಜವನ್ನು ಜಾಗೃತಗೊಳಿಸುವ ಪ್ರಯತ್ನವನ್ನು ಮಾಡಬಹುದು.

ಸಂಪಾದಕ



ಯಸ್ಯ ಸರ್ವೇ ಸಮಾರಂಭಾಃ ಕಾಮ ಸಂಕಲ್ಪ ವರ್ಜಿತಾಃ।
ಜ್ಞಾನಾಗ್ನಿದಗ್ಧ ಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥

'ಯಾವನ ಕರ್ಮಗಳೆಲ್ಲ ಕಾಮ ಸಂಕಲ್ಪಗಳಿಂದ ಬಿಡಲ್ಪಟ್ಟಿದೆಯೋ ಯಾವನ ಕರ್ಮಗಳು ಜ್ಞಾನವೆಂಬ ಅಗ್ನಿಯ ದ್ವಾರಾ ಸುಡಲ್ಪಟ್ಟಿದೆಯೋ ಅವನನ್ನು ಜ್ಞಾನಿಗಳು ಪಂಡಿತನೆಂದು ಹೇಳುವರು.'

- ಭಗವದ್ಗೀತೆ(ಅ-4;ಶ್ಲೋ-19)

# ಪರಿವಿಡಿ


- "ಶಿಕ್ಷಣದಲ್ಲಿ ಭಾರತೀಯತೆ" ವಿಚಾರಸಂಕಿರಣ ಶಿಕ್ಷಕರಿಗೆ ಏಕೆ ? ಒಂದು ಚಿಂತನೆ 3
- ಶೈಕ್ಷಿಕ ಮಹಾಸಂಘದ ಸಭೆ–ಬೆಳಗಾಂ 4
- ಸಿ. ಪಿ.ಇ ಕಾರ್ಯಾಗಾರ: ಬಳ್ಳಾರಿ 5
- ಹೀಗಿದ್ದರು ವಲ್ಲಭಾಯಿ ಪಟೇಲ್ 6
- ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಹಿರಿದು 7
- ಸೋದರಿ ನಿವೇದಿತ 8
- ವಿದ್ಯಾರ್ಥಿ ಮಿತ್ರ – 13 10
- ಸಾಧಕರನ್ನು ಸ್ಮರಿಸೋಣ 11

# "ಶಿಕ್ಷಣದಲ್ಲಿ ಭಾರತೀಯತೆ" ವಿಚಾರಸಂಕಿರಣ




**ಮಮತಾ ಡಿ. ಕೆ.**
**ಸಹಶಿಕ್ಷಕಿ**
**ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ,**
**ರಾಮನಗರ ಜಿಲ್ಲಾ ಮಹಿಳಾ ಪ್ರತಿನಿಧಿ**


**ಅಪೂರ್ವಃ ಕೋಪಿ ಕೋಶೋಯಂ ।**
**ವಿದ್ಯತೇ ತವ ಭಾರತಿ ।**
**ವ್ಯಯತೋ ವೃದ್ಧಿ ಮಾಯಾತಿ ।**
**ಕ್ಷಯ ಮಾಯಾತಿ ಸಂಚಯಾತ್ ॥**

*ಹೇ ಸರಸ್ವತಿ, ನಿನ್ನ ಕೋಶಭಂಡಾರದ ವೈಶಿಷ್ಟ್ಯವು ವಿಚಿತ್ರವಾದದ್ದು. ವ್ಯಯ ಮಾಡಿದಷ್ಟೂ ಹೆಚ್ಚುತ್ತಾ ಹೋಗುತ್ತದೆ. ಯಾರಿಗೂ ವಿದ್ಯೆಯನ್ನು ಹೇಳಿಕೊಡದೇ ಸಂಗ್ರಹಿಸಿದಷ್ಟೂ ನಶಿಸಿಹೋಗುತ್ತದೆ. ಇದನ್ನು ಸಂಪೂರ್ಣವಾಗಿ ಅರಿತುಕೊಂಡು ನಿಸ್ವಾರ್ಥವಾಗಿ ಜ್ಞಾನವನ್ನು ಹಂಚುವವರೇ ನಿಜವಾದ ಶಿಕ್ಷಕರು.*

"ಶಿಕ್ಷಣದಲ್ಲಿ ಭಾರತೀಯತೆ" ವಿಚಾರಸಂಕಿರಣ ಶಿಕ್ಷಕರಿಗೆ ಏಕೆ ? ಈ ವಿಷಯುವನ್ನು ವಿಮರ್ಶಿಸುವ ಮೊದಲು ಶಿಕ್ಷಕರೆಂದರೆ ತನ್ನ ಜ್ಞಾನದಾಹವನ್ನು ತೀರಿಸಿಕೊಂಡು ಇನ್ನೊಬ್ಬರಿಗೆ ನಿಸ್ವಾರ್ಥ ಗುಟುಕನ್ನು ನೀಡುವವರು.

**ಗುರುಬ್ರಹ್ಮಾ ಗುರುರ್ವಿಷ್ಣುಃ**
**ಗುರುರ್ದೇವೋ ಮಹೇಶ್ವರಃ ।**
**ಗುರು ಸಾಕ್ಷಾತ್ ಪರಬ್ರಹ್ಮಾಃ**
**ತಸ್ಮೈಶ್ರೀ ಗುರುವೇ ನಮಃ ॥**

*ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಪ್ರಮುಖ ಕರ್ತವ್ಯಗಳೆಂದರೆ ಸೃಷ್ಟಿ, ಸ್ಥಿತಿ ಮತ್ತು ಲಯ. ಅರ್ಥಾತ್ ರಚನೆ, ಸಂರಕ್ಷಣೆ ಮತ್ತು ವಿನಾಶ. ಅಂತಹ ತ್ರಿಮೂರ್ತಿಗಳ ಸ್ಥಾನದಲ್ಲಿ ಗುರುವನ್ನು ಕೂರಿಸಿ ಗೌರವಿಸಿರುವುದನ್ನು ನಾವು ಕಾಣುತ್ತೇವೆ. ಗುರುವನ್ನು ಪರಬ್ರಹ್ಮ ಎಂಬುದಾಗಿ ಕರೆದು ಅತ್ಯಂತ ಶ್ರೇಷ್ಠ ಸ್ಥಾನವನ್ನು ನೀಡಲಾಗಿದೆ.*

'ಗು' ಎಂದರೆ ಕತ್ತಲನ್ನು 'ರು' ಎಂದರೆ ಹೋಗಲಾಡಿಸುವವನು – ಕತ್ತಲನ್ನು ದೂರಮಾಡಿ ಜ್ಞಾನದೀವಿಗೆಯನ್ನು ಹಚ್ಚುವವರೇ "ಗುರು" ಎಂಬುದಾಗಿ 'ಗುರು' ಎಂಬ ಪದವನ್ನು ಅರ್ಥೈಸಲಾಗಿದೆ. ಇದೆಲ್ಲದರಿಂದ ಶಿಕ್ಷಕ ವೃತ್ತಿ ಎಂತಹ ಪವಿತ್ರಕಾರ್ಯವೆಂದು ನಮಗೆ ತಿಳಿಯುತ್ತದೆ.

ಶಿಕ್ಷಕ ತಾನು ಪಡೆದುಕೊಂಡ ಅರಿವನ್ನು(ಜ್ಞಾನವನ್ನು) ತನ್ನ ವಿದ್ಯಾರ್ಥಿಗಳಿಗೆ ನೀಡುವುದರ ಮೂಲಕ ಇಡೀ ಸಮಾಜಕ್ಕೆ ಆ ಜ್ಞಾನವನ್ನು ನಿಸ್ವಾರ್ಥವಾಗಿ ಹಂಚಿಕೆ ಮಾಡಬಲ್ಲ ಹಂಚಿಕೆದಾರ.

"ಭಾರತೀಯತೆ" ಎಂಬುದು ಭಾರತೀಯನಿಗೆ ಹೇಳಿಕೊಡಬೇಕಾದ ಗುಣವಲ್ಲ. ಪ್ರತಿಯೊಬ್ಬ ಭಾರತೀಯನಿಗೆ ಜನ್ಮಜಾತವಾಗಿ ಇರುವ ಗುಣ. ಆದರೆ ಇತ್ತೀಚಿನ ದಿನಗಳಲ್ಲಿ ಪಾಶ್ಚಿಮಾತ್ಯೀಕರಣದಿಂದ ಭಾರತೀಯ ತನ್ನ ಭಾರತೀಯತೆಯನ್ನು ಮರೆಯುತ್ತಿದ್ದಾನೆ. ಅದನ್ನು ಜಾಗೃತಗೊಳಿಸುವ ಕೆಲಸವನ್ನು ಶಿಕ್ಷಕನಲ್ಲದೆ ಮತ್ತಾರು ಮಾಡಲು ಸಾಧ್ಯ? ಪ್ರತಿಯೊಬ್ಬ ಭಾರತೀಯನು ತನಗೆ ಜನ್ಮ ನೀಡಿರುವ ಭಾರತಮಾತೆಯ ತನುವಿನಲ್ಲಿ ಅಡಗಿರುವ ಸಂಪತ್ತು, ಸಂಸ್ಕೃತಿ ಮತ್ತು ವೇದೋಪನಿಷತ್ತಿನ ಅರಿವನ್ನು ಪಡೆದರೆ ಭಾರತೀಯತೆ ಎಂಬುದು ಸಹಜವಾಗಿ ಅವರ ಮನದಲ್ಲಿ ಮೂಡಿಬರುತ್ತದೆ. "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ" ಎಂಬಂತೆ ಸಂಪದ್ಭರಿತ ಭಾರತೀಯತೆಯನ್ನು ಬಿಟ್ಟು ಪಾಶ್ಚಾತ್ಯೀಕರಣವನ್ನು ಅನುಸರಿಸುತ್ತಿರುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ.

ಸಮಾಜದಲ್ಲಿ ಬೇರೆ ಯಾವುದೇ ವೃತ್ತಿಯಲ್ಲಿ ತೊಡಗಿರುವ ವ್ಯಕ್ತಿಗೆ ಈ ಶಿಕ್ಷಣವನ್ನು ನೀಡಿದರೆ ಅವರು ತಮ್ಮ ವೃತ್ತಿಯಲ್ಲಿ ಮತ್ತು ತಮ್ಮೊಂದಿಗೆ ವೃತ್ತಿಯಲ್ಲಿ ನಿರತರಾದವರಿಗೆ ತಿಳಿಸಬಹುದು. ಆದರೆ ತಾವು ತಿಳಿದದ್ದನ್ನು ಬೇರೆಯವರಿಗೆ ಹೇಳಿಕೊಟ್ಟರೆ ಅವರು ಕಲಿತು, ತಮಗೆ ಏನೋ ನಷ್ಟವಾಗಿಬಿಡುತ್ತದೆ ಎಂಬ ಭಯ ಕೆಲವರನ್ನು ಕಾಡುತ್ತದೆ. ಹೀಗಾಗಿ ತಾವು ತಿಳಿದಿದ್ದನ್ನು ಬೇರೆಯವರಿಗೆ ಹೇಳದೆ, ಕೆಲವು ದಿನಗಳಲ್ಲಿ ಇವರಿಗೂ ಮರೆತು ಹೋಗುತ್ತದೆ.

ಲಕ್ಷ್ಮಿಯ ಕೋಶಕ್ಕೂ ಸರಸ್ವತಿಯ ಕೋಶಕ್ಕೂ ಹಿರಿದಾದ ಅಂತರವಿದೆ. ಲಕ್ಷ್ಮಿಯ ಕೋಶವು ವ್ಯಯ ಮಾಡಿದಂತೆ ಬರಿದಾದರೆ, ಸರಸ್ವತಿಯ ಕೋಶವು ವ್ಯಯಮಾಡಿದಷ್ಟೂ ವರ್ಧಿಸುತ್ತದೆ. ಈ ರಹಸ್ಯವನ್ನು ಅರ್ಥಮಾಡಿಕೊಂಡು ತನ್ನ ಜ್ಞಾನವನ್ನು ಇತರರಿಗೆ ಹಂಚುವವನು ಶಿಕ್ಷಕ ಮಾತ್ರ.

ತೈತ್ತೀರಿಯೋಪಷತ್ತಿನ ಬ್ರಹ್ಮಾನಂದವಲ್ಲಿಯ ಬಗ್ಗೆ ತಿಳಿಸುವಾಗ ಗುರುಕುಲದ ಆಚಾರ್ಯರು ಪಂಚಕೋಶಗಳ ಬಗ್ಗೆ ಅರಿವನ್ನು ನೀಡಿದರು. ಇತ್ತೀಚಿಗೆ ಶಿಕ್ಷಕರು ಬೋಧನೆಯಲ್ಲಿ ಪಾಶ್ಚಿಮಾತ್ಯರ ಮನೋವಿಜ್ಞಾನವನ್ನು ಅನುಸರಿಸುತ್ತಿದ್ದಾರೆ. ನಮಗೆ ನಮ್ಮ ವೇದೋಪನಿಷತ್ತಿನಲ್ಲಿರುವ ಮನೋವಿಜ್ಞಾನವನ್ನು ಅರಿಯುವ ಅವಕಾಶ ಈ ವಿಚಾರಸಂಕಿರಣದಿಂದ ದೊರೆಯಿತು. ಒಬ್ಬ ಶಿಕ್ಷಕ ತನ್ನ ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಯನ್ನು ಅಪೇಕ್ಷಿಸುತ್ತಿದ್ದರೆ, ಆ ವಿದ್ಯಾರ್ಥಿಯ ತನು, ಮನದ ಸ್ಥಿತಿಯನ್ನು ಅರಿತು ಬೋಧಿಸುವುದು ಅತ್ಯಂತ ಅವಶ್ಯಕ. ಪಂಚಕೋಶಗಳಾದ ಅನ್ನಮಯಕೋಶ (7 ಧಾತುಗಳು– ರಸ, ರಕ್ತ, ಮಾಂಸ, ಅಸ್ಥಿ (ಎಲುಬು), ಮೇಧಸ್ಸು, ಮಜ್ಜ), ಪ್ರಾಣಮಯಕೋಶ (5 ಪ್ರಾಣಗಳು + 5 ಕರ್ಮೇಂದ್ರಿಯ + 72 ಸಾವಿರ ನಾಡಿ),

**ಪುಟ 8 ಕ್ಕೆ ➢**

# ಶೈಕ್ಷಿಕ ಮಹಾಸಂಘದ ಸಭೆ–ಬೆಳಗಾಂ

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಎರಡನೇ ರಾಷ್ಟ್ರೀಯ ಕಾರ್ಯಕಾರಿಣಿ ಹಾಗೂ ಸಾಧಾರಣ ಸಭೆಯು ಇದೇ ತಿಂಗಳ ಒಂದು ಮತ್ತು ಎರಡನೇ ತಾರೀಖಿನಂದು ಬೆಳಗಾಂ ನಗರದಿಂದ 15 ಮೈಲಿ ದೂರದಲ್ಲಿರುವ ಪುಣ್ಯ ಸ್ಥಳ 'ಪಂತ್ ಬಾಳೆಕುಂದಿ' ಕ್ಷೇತ್ರದ ಆವರಣದಲ್ಲಿ ನಡೆಯಿತು. ದೇಶದ 22 ರಾಜ್ಯಗಳಿಂದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣ ವಿಭಾಗಗಳಿಂದ 80ಕ್ಕೂ ಅಧಿಕ ಶಿಕ್ಷಕ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ಮಹಿಳಾ ವಿಭಾಗದಿಂದ ಜಮ್ಮುವಿನಿಂದ ಕರ್ನಾಟಕದವರೆಗಿನ 25 ಶಿಕ್ಷಕಿಯರು ಭಾಗವಹಿಸಿದ್ದುದು ಈ ಬಾರಿಯ ವಿಶೇಷ.

ದಿನಾಂಕ:31.10.2014 ರಂದು ಬೆಳಗಿನಿಂದ ಸಂಜೆಯವರೆಗೆ ನಡೆದ ಮಹಿಳಾ ವಿಭಾಗದ ಸಭೆಯು ಡಾ॥ ನಿರ್ಮಲಾ ಯಾದವ್ ಅವರ ಅಧ್ಯಕ್ಷತೆಯಲ್ಲಿ ವಿವಿಧ ರಾಜ್ಯಗಳಲ್ಲಿರುವ ಶಿಕ್ಷಕಿಯರ ಸಮಸ್ಯೆಗಳು ಹಾಗೂ ಪರಿಹಾರದ ಬಗ್ಗೆ ವಿವರವಾಗಿ ಚರ್ಚಿಸಿತು. ಕಾರ್ಯದರ್ಶಿಗಳಾದ ಪೂನಾದ ಶ್ರೀಮತಿ ಪ್ರಿಯಂವದಾ ಸಕ್ಸೇನಾರವರು ಉತ್ತರ ರಾಜ್ಯಗಳಲ್ಲಿನ ತಮ್ಮ ಪ್ರವಾಸದ ಅನುಭವವನ್ನು ಎಲ್ಲರೊಂದಿಗೆ ಹಂಚಿಕೊಂಡು ಕಾರ್ಯಕರ್ತರ ಪ್ರವಾಸದಿಂದ ಮಾತ್ರ ಶಿಕ್ಷಕ ಸಂಘ ಬೆಳೆಯುವುದೆಂಬ ಮಾತನ್ನು ನೆನಪಿಸಿದರು.

ಸಹಕಾರ್ಯದರ್ಶಿಗಳಾದ ಕರ್ನಾಟಕದ ಶ್ರೀಮತಿ ಆರ್. ಸೀತಾಲಕ್ಷ್ಮಿಯವರು ವಂದನಾರ್ಪಣೆಯೊಂದಿಗೆ ಅಂದಿನ ಕಲಾಪ ಮುಗಿಸಿದರು.

ದಿನಾಂಕ 01.11.14 ರಂದು ಬೆಳಗ್ಗೆ ತಾಯಿ ಸರಸ್ವತಿಯ ಮುಂದೆ ದೀಪ ಬೆಳಗಿಸುವ ಮೂಲಕ ರಾಷ್ಟ್ರೀಯ ಕಾರ್ಯಕಾರೀ ಸಮಿತಿ ಪ್ರಾರಂಭವಾಯಿತು. ಪ್ರಧಾನ ಕಾರ್ಯದರ್ಶಿಗಳಾದ ಡಾ॥ ಜೆ.ಪಿ ಸಿಂಘಲ್‌ರವರು ದೇಶದ ವಿವಿಧ ಭಾಗಗಳಲ್ಲಿ ನಡೆದ ಕಾರ್ಯ ಚಟುವಟಿಕೆಗಳ ವರದಿಯನ್ನು ನೀಡುತ್ತಾ ರಾಜಸ್ಥಾನದ ಜಯಪುರ ವಿಶ್ವವಿದ್ಯಾಲಯದಲ್ಲಿ ಉಚ್ಚ ಶಿಕ್ಷಣ ವಿಭಾಗದ ವತಿಯಿಂದ 'ಉಚ್ಚ ಶಿಕ್ಷಣದಲ್ಲಿ ನಿಯಂತ್ರಕ ತಂತ್ರ' (Regulatory Mechanism in Higher Education) ಎಂಬ ವಿಷಯದ ಮೇಲೆ 2 ದಿನಗಳ ಕಾಲ ನಡೆದ ಸೆಮಿನಾರ್‌ನಲ್ಲಿ 14 ರಾಜ್ಯಗಳ 67 ವಿಶ್ವವಿದ್ಯಾಲಯಗಳಿಂದ 700 ಜನಕ್ಕೂ ಅಧಿಕ ಶಿಕ್ಷಕರು ಭಾಗವಹಿಸಿದುದು ವಿಶೇಷ ಎಂದು ತಿಳಿಸಿದರು.

2015ರ ಗುರು ಪೂರ್ಣಿಮೆಯಂದು ಪ್ರಾಥಮಿಕ, ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣ ವಿಭಾಗದಲ್ಲಿ ಇಡೀ ದೇಶದಿಂದ ಆರಿಸಿದ ಪ್ರತಿಭಾನ್ವಿತ ಶಿಕ್ಷಕರನ್ನು ಪುರಸ್ಕರಿಸುವ ಯೋಜನೆಗೆ ಸಂಬಂಧಿಸಿದಂತೆ ಎಲ್ಲಾ ರಾಜ್ಯ ಘಟಕಗಳೂ ಡಿಸೆಂಬರ್ 30 ರೊಳಗಾಗಿ ಹೆಸರುಗಳನ್ನು ಕೇಂದ್ರ ಕಾರ್ಯಾಲಯಕ್ಕೆ ಕಳುಹಿಸಬೇಕೆಂದು ವಿನಂತಿಸಿದರು.

ಮುಂದಿನ ರಾಷ್ಟ್ರೀಯ ಕಾರ್ಯಕಾರಿಣಿಯನ್ನು ಜನವರಿ 31 ಮತ್ತು ಫೆಬ್ರವರಿ 1ರಂದು ಜಮ್ಮು ಬಳಿಯ ಕಾಟ್ರಾದಲ್ಲಿ ನಡೆಸಬೇಕೆಂಬುದು ತೀರ್ಮಾನಿಸಲಾಯಿತು.

ದಿನಾಂಕ: 10.11.2014 ಮಹಾಸಂಘದ ಸಾಧಾರಣ ಸಭೆಯು ನಡೆಯಿತು. ಈ ಸಮಯದಲ್ಲಿ ಕಳೆದ 3 ವರ್ಷಗಳ ಹಿಂದೆ ಚುನಾಯಿತವಾಗಿದ್ದ ಶೈಕ್ಷಿಕ ಮಹಾಸಂಘದ ಚುನಾಯಿತ ಸಮಿತಿಯನ್ನು ವಿಸರ್ಜಿಸಿ ಹೊಸದಾಗಿ ಮುಂದಿನ 3 ವರುಷಗಳಿಗೆ ಆಡಳಿತ ಸಮಿತಿಯನ್ನು ಚುನಾಯಿಸಲಾಯಿತು.

## ನೂತನ ಕೇಂದ್ರೀಯ ಆಡಳಿತ ಮಂಡಳಿ

| | | |
|---|---|---|
| ಅಧ್ಯಕ್ಷ | : | **ಡಾ॥ ವಿಮಲ್ ಪ್ರಸಾದ್ ಅಗರ್‌ವಾಲ್** |
| ಪ್ರಧಾನ ಕಾರ್ಯದರ್ಶಿ | : | **ಡಾ॥ ಜಗದೀಶ್ ಪ್ರಸಾದ್ ಸಿಂಘಲ್** |
| ಸಹ ಪ್ರಧಾನ ಕಾರ್ಯದರ್ಶಿ | : | **ಪ್ರೊ॥ ಕೆ. ಬಾಲಕೃಷ್ಣ ಭಟ್** |
| ಮಹಿಳಾ ವಿಭಾಗದ ಉಪಾಧ್ಯಕ್ಷರು | : | **ಶ್ರೀಮತಿ ಪ್ರಿಯಂವದ ಸಕ್ಸೇನಾ (ಮಹಾರಾಷ್ಟ್ರ)** |
| ಪ್ರಾಥಮಿಕ ವಿಭಾಗದ ಉಪಾಧ್ಯಕ್ಷರು | : | **ಶ್ರೀ ಜಗದೀಶ ಸಿಂಹ ಚವ್ಹಾನ್ (ದೆಹಲಿ)** |
| ಮಾಧ್ಯಮಿಕ ವಿಭಾಗದ ಉಪಾಧ್ಯಕ್ಷರು | : | **ಡಾ॥ ಅಶೋಕ ಕುಮಾರ್ ಸಿಂಹ (ಜಾರ್ಖಂಡ್)** |
| ಉಚ್ಚ ಶಿಕ್ಷಣ ವಿಭಾಗದ ಉಪಾಧ್ಯಕ್ಷರು | : | **ಡಾ॥ ನಿರ್ಮಲಾ ಯಾದವ್ (ಉತ್ತರ ಪ್ರದೇಶ)** |
| ಮಹಿಳಾ ವಿಭಾಗದ ಕಾರ್ಯದರ್ಶಿ | : | **ಶ್ರೀಮತಿ ಆರ್. ಸೀತಾಲಕ್ಷ್ಮಿ (ಕರ್ನಾಟಕ)** |
| ಕಾರ್ಯದರ್ಶಿ : ಪ್ರಾಥಮಿಕ ವಿಭಾಗ | : | **ಶ್ರೀ ಹಿಮ್ಮತ್ ಸಿಂಹ ಜೈನ್ (ಮಧ್ಯಪ್ರದೇಶ)** |
| ಕಾರ್ಯದರ್ಶಿ : ಮಾಧ್ಯಮಿಕ ವಿಭಾಗ | : | **ಶ್ರೀ ಮೋಹನ ಪುರೋಹಿತ (ರಾಜಾಸ್ಥಾನ)** |
| ಕಾರ್ಯದರ್ಶಿ : ಉಚ್ಚ ಶಿಕ್ಷಣ ವಿಭಾಗ | : | **ಶ್ರೀ ಪ್ರಜ್ಞೇಶ್ ಶಹಾ (ಗುಜರಾತ್)** |

**ಪುಟ 5 ಕ್ಕೆ ➢**

➢ ಪುಟ 4 ರಿಂದ.....

**ಶೈಕ್ಷಿಕ ಮಹಾಸಂಘದ ಸಭೆ**

| | | |
|---|---|---|
| ಸಹ ಕಾರ್ಯದರ್ಶಿ: ಮಹಿಳಾ ವಿಭಾಗ | : | **ಡಾ|| ಸುದೇಷ್ಣ ಶರ್ಮ (ದೆಹಲಿ)** |
| ಸಹ ಕಾರ್ಯದರ್ಶಿ: ಪ್ರಾಥಮಿಕ ವಿಭಾಗ | : | **ಶ್ರೀಮತಿ ಸುಧಾ ಮಿಶ್ರ (ಉತ್ತರ ಪ್ರದೇಶ)** |
| ಸಹ ಕಾರ್ಯದರ್ಶಿ: ಮಾಧ್ಯಮಿಕ ವಿಭಾಗ | : | **ಶ್ರೀ ಪಿ. ವೆಂಕಟರಾವ್ (ತೆಲಂಗಾಣ)** |
| ಸಹ ಕಾರ್ಯದರ್ಶಿ : ಉಚ್ಚ ಶಿಕ್ಷಣ ವಿಭಾಗ | : | **ಡಾ|| ಮನೋಜ್ ಸಿನ್ಹಾ (ದೆಹಲಿ)** |
| ಕೋಶಾಧ್ಯಕ್ಷರು | : | **ಶ್ರೀ ಬಜರಂಗ ಪ್ರಸಾದ್ ಮಜೇಜಿ (ರಾಜಾಸ್ಥಾನ)** |
| ಆಂತರಿಕ ಲೆಕ್ಕ ಪರಿಶೋಧಕರು | : | **ಶ್ರೀ ಪವನ್ ಮಿಶ್ರ (ಹಿಮಾಚಲ ಪ್ರದೇಶ)** |
| **ನಾಮಾಂಕಿತ ಪದಾಧಿಕಾರಿಗಳು** | | |
| ಸಂರಕ್ಷಕರು | : | **ಪ್ರೊ|| ಕೃ. ನರಹರಿ** |
| ಸಂಘಟನಾ ಕಾರ್ಯದರ್ಶಿ | : | **ಶ್ರೀ ಮಹೇಂದ್ರ ಕಪೂರ್** |
| ಸಹ ಸಂಘಟನಾ ಕಾರ್ಯದರ್ಶಿ | : | **ಶ್ರೀ ಓಂಪಾಲ್ ಸಿಂಹ** |
| ಉಚ್ಚ ಶಿಕ್ಷಣದ ಪ್ರಭಾರಿ | : | **ಶ್ರೀ ಮಹೇಂದ್ರ ಕುಮಾರ್** |

**ಖಾಯಂ ಆಹ್ವಾನಿತರು**

1. **ಶ್ರೀಮತಿ ಸಂಜೀವಿನಿ ರಾಯಕರ್ (ಮಹಾರಾಷ್ಟ್ರ)**
2. **ಪ್ರೊ|| ಸಂತೋಷ ಪಾಂಡೇಯ (ರಾಜಸ್ಥಾನ)**
3. **ಶ್ರೀ ಅಜಿತ ಬಿಶ್ವಾಸ್ (ಪಶ್ಚಿಮ ಬಂಗಾಳ)**
4. **ಶ್ರೀ ರಾಮಕೃಷ್ಣ ನವಾಲ್ (ಮಧ್ಯಪ್ರದೇಶ)**
5. **ಶ್ರೀ ಟಿ. ಸುಬ್ಬಾರಾವ್ (ಆಂಧ್ರಪ್ರದೇಶ)**
6. **ಡಾ|| ವಿನೋದ್ ಬಾನರ್ಜಿ(ಉತ್ತರ ಪ್ರದೇಶ)**
7. **ಶ್ರೀ ಗೋವಿಂದ ಗಣೇಶದೇವ್ (ಗೋವಾ)**

**ವಿಭಾಗ ಪ್ರಮುಖರು**

ಪ್ರಕಾಶನ : **ಶ್ರೀ ವಿಷ್ಣು ಪ್ರಸಾದ್ ಚತುರ್ವೇದಿ (ರಾಜಸ್ಥಾನ)**
ಪ್ರಶಿಕ್ಷಣ : **ಶ್ರೀ ಹೆಚ್. ನಾಗಭೂಷಣ ರಾವ್ (ಕರ್ನಾಟಕ)**
ಮಾಧ್ಯಮ : **ಶ್ರೀ ವಿಜಯ ಸಿಂಹ (ಮಧ್ಯಪ್ರದೇಶ)**
ಶೈಕ್ಷಣಿಕ : **ಪ್ರೊ|| ರಮೇಶ್ ಚಂದ್ರ ಸಿನ್ಹ (ಬಿಹಾರ್)**

# ಸಿ. ಪಿ.ಇ ಕಾರ್ಯಾಗಾರ: ಬಳ್ಳಾರಿ


ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ತಾಲೂಕು ಘಟಕವು ದಿನಾಂಕ 15-09-2014 ರ ಸೋಮವಾರದಂದು ಪ್ರೌಢಶಾಲಾ ಶಿಕ್ಷಕರಿಗಾಗಿ 'ನಿರಂತರ ಮೌಲ್ಯಮಾಪನ', ಈ ವಿಷಯವಾಗಿ ಒಂದು ದಿನದ ಕಾರ್ಯಾಗಾರವನ್ನು ಬಳ್ಳಾರಿಯ ಬಾಲಭಾರತಿ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿತ್ತು. ಬಳ್ಳಾರಿ, ಪೂರ್ವ, ಪಶ್ಚಿಮ ಮತ್ತು ಸಿರಗುಪ್ಪ ತಾಲೂಕಿನ 160 ಜನ ಪ್ರೌಢಶಾಲೆ ಶಿಕ್ಷಕರು, ವಿವಿಧ ವಿಷಯಗಳಲ್ಲಿ ವಿಷಯ ಪರಿಣಿತರಾದ ಶ್ರೀ ಶಿವಶಂಕ್ರಪ್ಪ- ಗಣಿತ, ಶ್ರೀ ಪುಟ್ಟಯ್ಯ-ವಿಜ್ಞಾನ, ಶ್ರೀ ರಂಗಪ್ಪಸ್ವಾಮಿ-ಸಮಾಜ ವಿಜ್ಞಾನ, ಶ್ರೀ ಆಂಥೋಣಿ ಇ.ಓ ಅವರುಗಳು ಹಾಗೂ ಬಾಲಭಾರತಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಜಯ, ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಕೆ. ಬಾಲಕೃಷ್ಣಭಟ್, ಉಪಾಧ್ಯಕ್ಷರಾದ ಶ್ರೀ ಆರ್. ಕೊಟ್ರಪ್ಪ, ಜಿಲ್ಲಾ ಅಧ್ಯಕ್ಷರಾದ ಶ್ರೀ ಎ. ಗುಂಡಾಚಾರ್, ಸಂಪನ್ಮೂಲ ವ್ಯಕ್ತಿ ಶ್ರೀ ರಾಜ, ಬೆಂಗಳೂರು ದಕ್ಷಿಣ ಜಿಲ್ಲಾ ಅಧ್ಯಕ್ಷರು, ಆಗಮಿಸಿದ್ದರು.

ಬೆಳಗ್ಗೆ ಉದ್ಘಾಟನಾ ಕಾರ್ಯಕ್ರಮದ ನಂತರ, ವಿಶ್ವೇಶ್ವರಯ್ಯನವರು ಬದುಕಿ ಬಾಳಿದ ರೀತಿ, ಆದರ್ಶ, ಅಚ್ಚುಕಟ್ಟುತನ, ಸಮಯ ಪ್ರಜ್ಞೆ ಅವರ ಉಡುಪು ಅವರ ಇಡೀ ಬದುಕು ಕಿರಿಯರಿಗೆ ಮೇಲ್ಪಂಕ್ತಿಯಾಗಿತ್ತು, ಎಂದು ರಾಜು ವಿವರಿಸಿದರು. ಹಾಗೂ ನಿರಂತರ ವ್ಯಾಪಕ ಮೌಲ್ಯಮಾಪನ ವಿಷಯದ ಬಗ್ಗೆ ಒಂದೊಂದೇ ಅಂಶಗಳನ್ನು ಶಿಕ್ಷಕರಿಗೆ ಮನಮುಟ್ಟುವಂತೆ ಅವರು ತಿಳಿಸುತ್ತಿದ್ದರು. ಈ ವಿಷಯವಾಗಿ ಶಿಕ್ಷಕರ ಸಂದೇಹಗಳಿಗೆ ಸಮರ್ಪಕವಾದ ರೀತಿಯಲ್ಲಿ ಉತ್ತರವನ್ನು ನೀಡಿದರು.

ಸಮಾರೋಪ ಸಮಾರಂಭದಲ್ಲಿ ಶಿಕ್ಷಕರ ಅನಿಸಿಕೆಗಳನ್ನು ಹೇಳುವಾಗ ಶ್ರೀ ನರಸಿಂಹಮೂರ್ತಿಯವರು ಈ ಹಿಂದೆ ಸರ್ಕಾರ ನಡೆಸುವ ತರಬೇತಿಗಳಿಗೂ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಇಂದು ನೀಡಿದ ತರಬೇತಿಗೂ ಅಜಗಜಾಂತರ ವ್ಯತ್ಯಾಸವಿದ್ದು ಶೇ 90 ರಷ್ಟು ಸಮಸ್ಯೆಗಳಿಗೆ ಮಾಧ್ಯಮಿಕ ಶಿಕ್ಷಕ ಸಂಘದ ಈ ತರಬೇತಿಯು ಪರಿಹಾರ ನೀಡಿದೆ. ಈ ಹಿಂದೆ 3-4 ತರಬೇತಿ ಪಡೆದಿದ್ದರೂ ಏನೂ ಉಪಯೋಗವಾಗಿರಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಶ್ರೀಮತಿ ಮಲ್ಲಮ್ಮ ಸಿ.ಸಿ.ಇ ಬಗ್ಗೆ ಅನೇಕ ಗೊಂದಲ ಇತ್ತು, ಅನೇಕ ಮಾಹಿತಿ ಕೊರತೆ ಇತ್ತು, ಅತ್ಯುತ್ತಮ ರೀತಿಯಲ್ಲಿ ರಾಜು ತಿಳಿಸಿದ್ದಾರೆ ಎಂದು ಪ್ರಶಂಸಿಸಿದರು. ಆಂಥೋಣಿಯವರು ಮಾತನಾಡುತ್ತಾ ನಮ್ಮಲ್ಲಿ ನಿರಂತರ ಬದಲಾವಣೆ ಬೇಕಾಗಿದೆ ಎಂದು ಅನೇಕ ಉದಾಹರಣೆಗಳ ಮೂಲಕ ವಿವರಿಸಿದರು. ಶ್ರೀ ಬಾಲಕೃಷ್ಣಭಟ್ ರವರು ಶಿಕ್ಷಕ ಸಂಘದ ಧ್ಯೇಯಗಳನ್ನು, ನಮ್ಮದು ಇತರೆ ಶಿಕ್ಷಕ ಸಂಘಗಳಂತೆ ಅಲ್ಲ, ಶಿಕ್ಷಕ ಮೌಲ್ಯಗಳಿಗಾಗಿ ಬದುಕಿ ಬಾಳಬೇಕು ಎಂದು ನುಡಿದರು. ಸ್ವಾಗತ ಮತ್ತು ಪರಿಚಯ- ಶ್ರೀ ನರಸನಗೌಡ, ಶಿಕ್ಷಕ, ಪ್ರಾರ್ಥನೆ- ಶಾಲಾ ವಿದ್ಯಾರ್ಥಿನಿಯರಿಂದ.

**ವರದಿ : ಆರ್. ಕೊಟ್ರಪ್ಪ**

# ಹೀಗಿದ್ದರು ವಲ್ಲಭಾಯಿ ಪಟೇಲ್



**ನಂ. ನಾಗಲಕ್ಷ್ಮಿ**
**ಬೆಂಗಳೂರು**

ಸ್ವಾತಂತ್ರ್ಯಪೂರ್ವದ ದಿನಗಳು, ಸಿಮ್ಲಾದಲ್ಲಿ ಗಾಂಧೀಜಿ ಒಂದು ಕಡೆ, ಪಟೇಲ್ ಒಂದು ಕಡೆ ಇಳಿದುಕೊಂಡಿದ್ದರು. ನಡುವೆ ಎರಡು ಮೈಲಿ ಅಂತರ. ಒಂದು ಬೆಳಗಿನ ಝಾವ 'ಏನೋ ಮಾತಾಡಬೇಕು, ಸರ್ದಾರ್ ಕರೆದುಕೊಂಡುಬಾ' ಎಂದು ಗಾಂಧೀಜಿ ಆದೇಶ ನೀಡಿ ಇಬ್ಬರಿಗೂ ಆಪ್ತರಾದವರೊಬ್ಬರನ್ನು ಕಳುಹಿಸಿಕೊಟ್ಟಿದ್ದರು. ಕರೆಯಲು ಹೋದವರು ಕಂಡದ್ದು ಕೇವಲ ಚಡ್ಡಿ ಹಾಕಿ ಕುಳಿತಿದ್ದ ಪಟೇಲರನ್ನು, ಮೈಮೇಲಿನ ಬಟ್ಟೆಯನ್ನು ಒಗೆದು ಹಾಕಿದ್ದಾರೆ. ಮಗಳು ಮಣಿಬೆನ್ ತಂದೆಗೆ ತಲೆಗೆ ಎಣ್ಣೆ ಹಾಕಿ ಸ್ನಾನ ಮಾಡಿಸುವುದರಲ್ಲಿದ್ದಳು. ಗಾಂಧೀಜಿಯವರ ಆದೇಶವನ್ನು ಕೇಳಿದೊಡನೆ 'ಆ ಬಾಪೂಗೆ ಅದೇನು ಅವಸರ? ನನ್ನ ಬಟ್ಟೆಯೇ ಒಣಗಿಲ್ಲವಲ್ಲ? ಒಂದು ಬೆಡ್‌ಷೀಟ್ ಇದೆ. ಅದನ್ನೇ ಸುತ್ತಿಕೊಂಡು ಬರುತ್ತೇನೆ' ಎಂದು ಮೈಮೇಲೆ ಹರಿದ ಶಾಲನ್ನು ಹೊದ್ದು ಬಾಪೂಜಿ ಇದ್ದ ಕಡೆಗೆ ಧಾವಿಸಿದ್ದರು. ಹೀಗೆ ಜೀವಿಸಿದವರು ವಿರಳ. ಇಂಥ ಸರಳ ಸ್ವಭಾವ, ಇಂಥ ನಿಷ್ಠೆ ಎಲ್ಲಿ ಕಾಣಬೇಕು? ಜೆ.ಡಿ.ಬಿರ್ಲಾ, ರಾಧಾಕಿಶನ್ ಬಿರ್ಲಾ, ಜುಗಲ್‌ಕಿಶೋರ್ ಬಿರ್ಲಾ ಎಲ್ಲ ಇದ್ದಾರೆ. ಕೇಳಿದಷ್ಟು ಹಣ ಕೊಡ್ತಾರೆ– ಒಳ್ಳೆ ಉಡುಪು ಹಾಕಿಕೊಳ್ಳಬಾರದೆ? ಎಂದಾಗ ಅವರ ಉತ್ತರ 'ಹಾಗೆ ನಾನು ಮಾಡಿದ್ದರೆ ಅರಮನೆಯಲ್ಲಿರುತ್ತಿದ್ದೆ. ದೇಶಕ್ಕಾಗಿ ತ್ಯಾಗ ಮಾಡಬೇಕೆಂದರೆ ಬರೀ ಬಾಯಲ್ಲಿ ಹೇಳುವುದಲ್ಲ, ಮಾಡಿ ತೋರಿಸಬೇಕು' ಎಂದು ಗಾಂಧೀಜಿಯ ಉದಾಹರಣೆ ನೀಡಿದ್ದರು. ಇದು ಪಟೇಲ್ ವ್ಯಕ್ತಿತ್ವ.

ಆರುನೂರು ದೇಶೀಯ ಸಂಸ್ಥಾನಗಳನ್ನು ಅವರು ಬಗ್ಗಿಸದಿದ್ದರೆ ಇಂದು, ಅಖಿಲಭಾರತ ಎಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಮೈಸೂರು, ಹೈದರಾಬಾದ್, ಕಾಶ್ಮೀರ, ಬರೋಡ, ತಿರುವಾಂಕೂರು, ಪಾಟಿಯಾಲ ಎಂಬ ಆರು ದೊಡ್ಡ ಸಂಸ್ಥಾನಗಳು, ಗ್ವಾಲಿಯರ್, ಇಂದೂರು, ಕೊಲ್ಲಾಪುರ ಇತ್ಯಾದಿ ಚಿಕ್ಕ ಚಿಕ್ಕ ಸಂಸ್ಥಾನಗಳು ಒಬ್ಬೊಬ್ಬರದು ಒಂದೊಂದು ಬಗೆಯ ಪ್ರತಿಭಟನೆ. 'ಕಾಶ್ಮೀರ ಬಿಟ್ಟು ಉಳಿದ ದೇಶೀಯ ಸಂಸ್ಥಾನಗಳನ್ನು ನೀನು ನೋಡಿಕೋ' ಎಂಬುದು ನೆಹರು ನೀಡಿದ್ದ ಜವಾಬ್ದಾರಿಯಾಗಿತ್ತು. 'ಹದಿನೈದು ದಿವಸಗಳಲ್ಲಿ ಎಲ್ಲರನ್ನೂ ಮಲಗಿಸ್ತೀನಿ' ಎಂದಿದ್ದ ಪಟೇಲರಲ್ಲಿ ಒಂದು ಕೆಚ್ಚಿತ್ತು. 'ಪ್ರಾಣ ಹೋದರೂ ಹೋಗಲಿ, ಕೈಗೊಂಡ ಕಾರ್ಯ ನಿಲ್ಲಿಸಬಾರದು ಎಂಬುದು ಅವರ ಉದ್ದೇಶ. ಎಲ್ಲರೂ ಅವರಿಗೆ ತಲೆ ಬಾಗಿದ್ದರೂ ಹೈದರಾಬಾದಿನ ನಿಜಾಮ ಸ್ವಲ್ಪತೊಂದರೆ ಕೊಡಲು ನೋಡಿದ್ದ. ಪೋರ್ಚುಗೀಸರೊಂದಿಗೆ ಒಪ್ಪಂದಕ್ಕೆ ಪ್ರಯತ್ನಿಸಿದ್ದ. ನಿನ್ನ ತಲೆ ಉಳಿಯವುದು ಬೇಡವಾದರೆ ಅವರ ಜೊತೆ ಸೇರಿಕೋ, ಇಲ್ಲವಾದರೆ ನಮ್ಮ ಸೈನ್ಯ ಸಜ್ಜಾಗಿದೆ ಎಂದು ಪಟೇಲ್ ಬಾಂಬ್ ಸಿಡಿಸಿದರು. ಸದ್ದಿಲ್ಲದೆ ನಿಜಾಮ ಶರಣಾಗಿದ್ದ. ಇದು ಪಟೇಲ್ ಕಾರ್ಯವೈಖರಿ.

ಹೈದರಾಬಾದಿನಲ್ಲಿ 1949 ರ ಕಾಲದಲ್ಲಿ ಹಿಂದೂಗಳ ಮಾರಣಹೋಮವೇ ನಡೆದಿತ್ತು. ಆ ಸಮಯದಲ್ಲಿ (ಕರ್ನಾಟಕ) ಮೈಸೂರು ಸಂಸ್ಥಾನದಿಂದ ದೆಹಲಿಗೆ ಹೋಗಿದ್ದ ಟಿ.ಸಿದ್ದಲಿಂಗಯ್ಯ, ಹಾರನಹಳ್ಳಿ ರಾಮಸ್ವಾಮಿ ಮುಂತಾದ ಕೆಲವು ರಾಜಕೀಯ ನಾಯಕರು ಪಟೇಲರನ್ನು ಬೇಟಿ ಮಾಡಿದ್ದರು. ಅದು 'ಕರ್ನಾಟಕ ಎಂದು ರಾಜ್ಯಸ್ಥಾಪನೆಗೆ ಮನವಿ ಸಲ್ಲಿಸಲು ಹೋಗಿದ್ದ ಸಂದರ್ಭ. ಸಿದ್ದಲಿಂಗಯ್ಯ ಪಟೇಲರೊಡನೆ ಹೇಳಿದ್ದರು 'ಸ್ವಾಮಿ

**ಪುಟ 9 ಕ್ಕೆ ➤**

# ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಹಿರಿದು

✍ ರೇಣುಕ ಹಂಗನಳ್ಳಿ

ಒಂದು ರಾಷ್ಟ್ರದ ನಿಜವಾದ ಸಂಪತ್ತು ಅಲ್ಲಿನ ಪ್ರಜೆಗಳು. ಅಂದರೆ ರಾಷ್ಟ್ರದ ಅಭಿವೃದ್ಧಿಗಾಗಿ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲ ಇಚ್ಛಾಶಕ್ತಿ, ದೃಢತೆ, ಕ್ಷಮತೆ ಹಾಗೂ ದೂರದೃಷ್ಟಿ ಹೊಂದಿರುವ ಪ್ರಜೆಗಳು. ಇಂತಹ ಪ್ರಜೆಗಳನ್ನು ರೂಪಿಸುವ ಹೊಣೆಗಾರಿಕೆ ಆ ರಾಷ್ಟ್ರದ ಶಿಕ್ಷಕರ ಮೇಲಿರುತ್ತದೆ. ಅವರು ನೀಡುವ ಶಿಕ್ಷಣ ಎಂತಹುದಿರಬೇಕು?

ಶಿಕ್ಷಣ ಎಂಬುದು ಕೇವಲ ಅಕ್ಷರ ಜ್ಞಾನವಲ್ಲ. ಅದು ಒಂದು ರೀತಿಯ ಅರಿವು. ವ್ಯಕ್ತಿಯು ತನ್ನ ಬಗ್ಗೆ, ತನ್ನ ಪರಿಸರದ ವಿದ್ಯಮಾನಗಳ ಬಗೆಗೆ ತಿಳಿಯುವ ಅರಿವು. ಒಂದು ದೇಶ ಎಂತಹ ಪ್ರಜೆಗಳಿಂದ ತನ್ನ ಉನ್ನತಿಯನ್ನು ಹೊಂದುತ್ತದೆ ಎಂದು ಚಿಂತಿಸಿದಾಗ ಈ ಶಿಕ್ಷಣದ ಮಹತ್ವ ಅರಿವಾಗುತ್ತದೆ. ಶಿಸ್ತು, ಸಂಯಮ, ಸಮಯಪ್ರಜ್ಞೆ, ದುಡಿಮೆ ಮತ್ತು ಪ್ರಾಮಾಣಿಕತೆ ಎಂಬ ಐದು ಅಂಶಗಳನ್ನು ಸಂಪೂರ್ಣವಾಗಿ ಬದುಕಿನಲ್ಲಿ ಅಳವಡಿಸಿಕೊಂಡ ಪ್ರಜೆಗಳಿಂದ ಒಂದು ರಾಷ್ಟ್ರದ ಏಳಿಗೆ ಸಾಧ್ಯ. ಮುಂದುವರಿದ ದೇಶಗಳಲ್ಲಿ ಕಂಡುಬರುವ ಶಿಸ್ತು, ಸಮಯಪಾಲನೆ, ದುಡಿಮೆ ಈ ನಿಟ್ಟಿನಲ್ಲಿ ಮಾತ್ರ ಉತ್ತಮ ನಿದರ್ಶನವಾಗಿರುತ್ತದೆ. ಈ ಎಲ್ಲ ಗುಣಗಳು ವ್ಯಕ್ತಿಯ ಅಂತಃಸತ್ವವನ್ನು ಬಲಪಡಿಸುತ್ತವೆಂಬುದೂ ಸತ್ಯವೇ.

ಸ್ವಾಮಿ ವಿವೇಕಾನಂದರು ಹೇಳಿದ್ದಾರೆ 'ಯಾವ ಶಿಕ್ಷಣದಿಂದ ಮಗುವಿನ ಶೀಲ ರೂಪುಗೊಳ್ಳುವುದೊ, ಮನಶ್ಶಕ್ತಿ ವೃದ್ಧಿಯಾಗುವುದೊ, ಬುದ್ಧಿ ವಿಕಾಸಗೊಳ್ಳುವುದೊ ಮತ್ತು ಯಾವುದರಿಂದ ನಾವು ಸ್ವಾವಲಂಬಿಗಳಾಗಿ ನಮ್ಮ ಕಾಲಮೇಲೆ ನಾವು ನಿಂತುಕೊಳ್ಳಬಲ್ಲೆವೊ ಅಂತಹ ಶಿಕ್ಷಣವೇ ಮೌಲಿಕ ವಾದುದೆನಿಸಿಕೊಳ್ಳುತ್ತದೆ. ಅಂತಯೇ ಜ್ಞಾನಸಂಪಾದನೆಯೊಂದಿಗೆ ಉತ್ತಮ ನಡತೆ, ಗುಣಗಳನ್ನು ಜೀವನದುದ್ದಕ್ಕೂ ಅಳವಡಿಸಿ ಕೊಳ್ಳುವಲ್ಲಿ ವಿದ್ಯಾರ್ಥಿಗೆ ಶಿಕ್ಷಕನ ಅಗತ್ಯವಿರುತ್ತದೆ.

ನಿಜವಾದ ಶಿಕ್ಷಣದ ಆರಂಭ ಮನೆಯಲ್ಲಿ ನಿಜ. ಆದರೆ ಸಾಂಪ್ರದಾಯಿಕ ಶಿಕ್ಷಣ ಆರಂಭವಾಗುವುದು ಶಾಲೆಯಲ್ಲಿ. ಇಲ್ಲಿ ಶಿಕ್ಷಕರದ್ದೇ ಮಾರ್ಗದರ್ಶನ. ಮಕ್ಕಳಿಗೆ ಆರೋಗ್ಯಕರವಾದ ವಾತಾವರಣವನ್ನು ನಿರ್ಮಿಸಿ, ಅವು ಅವರು ಸಹಜವಾಗಿಯೂ ಸುಂದರವಾಗಿಯೂ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಬೇಕಾದ ಪ್ರಚೋದನೆಯನ್ನು ಶಿಕ್ಷಕರು ನೀಡಬೇಕೆಂಬುದೇ ಶಿಕ್ಷಣದ ಮೂಲತತ್ವ. ಹೀಗೆ ವ್ಯಕ್ತಿತ್ವದ ಪೂರ್ಣ ವಿಕಾಸವೇ ಶಿಕ್ಷಣದ ಗುರಿಯಾಗಿರುತ್ತದೆ. ಇದಕ್ಕಾಗಿ ಬುದ್ಧಿಯ ಬೆಳವಣಿಗೆಯಷ್ಟೇ ಭಾವಸಂಸ್ಕರಣವೂ ಅತ್ಯಗತ್ಯ. ಬುದ್ಧಿ ಭಾವಗಳ ಸಮನ್ವಯ ದೃಷ್ಟಿಯಿಂದಲೇ ಸುಸಂಸ್ಕೃತ ಸಮಾಜ ಸೃಷ್ಟಿಯಾಗುತ್ತದೆ. ಇಂತಹ ಸಮಾಜವಿದ್ದಲ್ಲಿಯೇ ಸುಭದ್ರ ರಾಷ್ಟ್ರ ನಿರ್ಮಾಣ ಸಾಧ್ಯವಾಗುವುದು. ಮಕ್ಕಳು ಕೇವಲ ಬುದ್ಧಿವಂತರಾದರೆ ಸಾಲದು. ಒಳ್ಳೆಯವರೂ ಆಗಬೇಕು. ಹಾಗೆ ಮಾಡುವುದು ಶಿಕ್ಷಕನ ಜವಾಬ್ದಾರಿ.

ಶಿಕ್ಷಣದ ಪರಿಪೂರ್ಣತೆ ಆ ಶಿಕ್ಷಣವನ್ನು ನೀಡಿದ ವ್ಯಕ್ತಿಯ ಉದಾತ್ತ ವಿಚಾರಗಳನ್ನು ಮತ್ತು ಅದನ್ನು ಪಡೆದ ವ್ಯಕ್ತಿಯು ಬೆಳೆಸಿಕೊಳ್ಳುವ ಸನ್ನಡತೆಯನ್ನು ಅವಲಂಬಿಸಿರುತ್ತದೆ. ಆದರೆ ಇಂದು ಇಂತಹ ಪರಿಪೂರ್ಣ ಶಿಕ್ಷಣದ ವ್ಯಾಖ್ಯೆ ಏನಾಗಿದೆ? ಕೇವಲ ಲೌಕಿಕ ಶಿಕ್ಷಣವನ್ನು ಮಾತ್ರ ಗಮನದಲ್ಲಿಟ್ಟು, ನೈತಿಕ ಶಿಕ್ಷಣ, ಆತ್ಮಶಿಕ್ಷಣಕ್ಕೆ ಒತ್ತುಕೊಡದೆ ಕೇವಲ ಬುದ್ಧಿವಂತನನ್ನಾಗಿ ಮಾಡುವ ಗುರಿ ಹೊಂದಿರುವುದನ್ನು ಕಾಣುತ್ತೇವೆ. ಸಂಸ್ಕಾರವಿಲ್ಲದ ವಿದ್ಯೆ ಕಾಗದದ ಹೂವಿನಂತೆ. ಸ್ವಯಂ ವ್ಯಕ್ತಿತ್ವ, ಸಾಮಾಜಿಕ ಪರಿಜ್ಞಾನ, ರಾಷ್ಟ್ರೀಯ ಪ್ರಜ್ಞೆ ಇವಾವುದೂ ಇಲ್ಲದ ಅರಿವು ಸಾರ್ಥಕವಾಗುವುದಿಲ್ಲ. ಪರಿಣಾಮ ಸಾಮಾಜಿಕ ಕ್ಷೋಭೆ ಘರ್ಷಣೆ, ಅಶಾಂತಿ, ಅಸಮಾಧಾನಗಳಿಗೆ ದಾರಿ. ವೈಯಕ್ತಿಕ ಜೀವನದ ಅಸಫಲತೆಯೊಂದಿಗೆ ಸಮಾಜಕ್ಕೆ ನೀಡಬೇಕಾದ ಕೊಡುಗೆಯೂ ಶೂನ್ಯವಾಗುತ್ತದೆ. ಶಿಕ್ಷಣವೆಂಬುದು ಕೇವಲ ಹಣಗಳಿಸಲು ಅಗತ್ಯವಾದ ಅಂಶವೆಂದಷ್ಟೇ ಅರಿವಾಗುತ್ತದೆ.

ನಮ್ಮ ಶಿಕ್ಷಣ ಇಂದು ಸಂಪೂರ್ಣ ಭಾರತೀಯ ವಾಗಬೇಕಾಗಿದೆ. ಅಂದರೆ ಪ್ರಾಚೀನ ಭಾರತದ ವಿದ್ಯೆ ಮೂಲತಃ ಆಧ್ಯಾತ್ಮ ವಿದ್ಯೆಯಾದರೂ ಲೌಕಿಕ ಶಿಕ್ಷಣವೂ ಅಲ್ಲಿನ ಅವಿಭಾಜ್ಯ ಅಂಗವಾಗಿತ್ತೆನ್ನುವುದನ್ನು ಮರೆಯಬಾರದು. ಸರ್ವಶಕ್ತಿ ಸಂಪನ್ನವಾದ ಒಂದು ಚೈತನ್ಯಕ್ಕೆ ಮುಸುಕಿದ ಆವರಣವನ್ನು ತೆಗೆಯುವುದೇ ಅಲ್ಲಿನ ಉದ್ದೇಶವಾಗಿರುತ್ತಿತ್ತು ಇಂದು ಕೂಡ ಅದೇ ರೀತಿ ವಿದ್ಯಾರ್ಥಿಗಳಲ್ಲಿ ಸಮಾನತೆಯ ತತ್ವ ರಾಷ್ಟ್ರೀಯ ಭಾವನೆಯನ್ನು ಬಾಲ್ಯದಿಂದಲೇ ರೂಢಿಸಿಕೊಳ್ಳುವಂತೆ ಶಿಕ್ಷಕರಾದವರು ಮಾಡಬೇಕು. ಇಂತಹ ಶಿಕ್ಷಣ ಪಡೆದ ಮಕ್ಕಳು ಮುಂದೆ ವ್ಯಕ್ತಿ ಮತ್ತು ಸಮಾಜದ ಉತ್ತಮಿಕೆಗೆ, ಆ ಮೂಲಕ ರಾಷ್ಟ್ರದ ಏಳಿಗೆಯಲ್ಲಿ ಪಾತ್ರ ವಹಿಸುವಂತಾಗುತ್ತದೆ. ಸಕಾರಾತ್ಮಕ ಆಲೋಚನೆಗಳೊಂದಿಗೆ ಉದಾತ್ತ, ಸನ್ನಡತೆಯ ವ್ಯಕ್ತಿತ್ವಕ್ಕಾಗಿ ಬುದ್ಧ, ವಿವೇಕಾನಂದ, ಗಾಂಧೀಜಿಯಂತಹವರ ಜೀವನ ವಿಚಾರಗಳನ್ನೂ ತಿಳಿಸಿ ವಿದ್ಯಾರ್ಥಿಗಳಲ್ಲಿನ ಸತ್ವವನ್ನು ಹೆಚ್ಚಿಸುವ ಕೆಲಸ ಶಿಕ್ಷಕರಿಂದಲೇ ಸಾಧ್ಯ. ಹೀಗೆ ಪ್ರಬುದ್ಧ ನಾಗರಿಕರನ್ನು ನಿರ್ಮಾಣ ಮಾಡುವ ಕೆಲಸ ಯಂತ್ರದ ಸಹಾಯದಿಂದ ಕಾರ್ಖಾನೆಗಳಲ್ಲಿ ಸಾಧ್ಯವಿಲ್ಲ. ಶಿಕ್ಷಕರಿಂದ ಮಾತ್ರ ಸಾಧ್ಯ. ಶಿಕ್ಷಕರು ಈ ಎಲ್ಲ ಸದ್ಗುಣಗಳನ್ನು ತಮ್ಮಲ್ಲಿ ರೂಢಿಸಿಕೊಂಡು ವಿದ್ಯಾರ್ಥಿಗಳಿಗೆ ಮೇಲ್ಪಂಕ್ತಿಯಾಗದೆ ಕೇವಲ ಉಪದೇಶದಿಂದ ಯಾವ ಬದಲಾವಣೆ ಸಾಧ್ಯವಾಗದು. ಅದಕ್ಕಾಗಿಯೇ ಹೀಗಿರುವ ಶಿಕ್ಷಕರನ್ನು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಗುರುವಿನ ಸ್ಥಾನಕ್ಕೆ ಏರಿಸಿರುವುದು. ●

➢ ಪುಟ 3 ರಿಂದ..... ವಿಚಾರ ಸಂಕಿರಣ

ಮನೋಮಯ ಕೋಶ (ಮನಸ್ಸು + 5 ಕರ್ಮೇಂದ್ರಿಯಗಳು), ವಿಜ್ಞಾನಮಯ ಕೋಶ ಮತ್ತು ಆನಂದಮಯಕೋಶಗಳನ್ನು ಅರಿತು ಬೋಧಿಸಿದರೆ ಒಬ್ಬ ವಿದ್ಯಾರ್ಥಿಯ ವಿದ್ಯಾಭ್ಯಾಸ "ಆಹಾ" ಎಂಬ ಉದ್ಘೋಷದಿಂದ ಕೊನೆಗೊಳ್ಳುತ್ತದೆಯೇ ಹೊರತು "ಅಯ್ಯೋ" ಎಂಬ ಉದ್ಘೋಷದಿಂದ ಅಲ್ಲ.

ಶಿಕ್ಷಕರು ತಮ್ಮ ಮನೆಯ ಸದಸ್ಯರಲ್ಲಿ ಮತ್ತು ಸಮಾಜದಲ್ಲಿ ಭಾರತೀಯತೆಯನ್ನು ತುಂಬುವಲ್ಲಿ ಸಫಲರಾಗುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿರುವ ಶಿಕ್ಷಕರು ವ್ಯಾಸರಂತಿರಬೇಕೇ ಹೊರತು ದ್ರೋಣರಂತಲ್ಲ ; ವಿದ್ಯಾರ್ಥಿಗಳು ನಚಿಕೇತನಂತಿರಬೇಕೇ ಹೊರತು ಶ್ವೇತಕೇತುವಿನಂತಲ್ಲ. ಶಿಕ್ಷಕರು ತರಗತಿ ಕೊಠಡಿಯಲ್ಲಿ ಸಾರ್ವಭೌಮರೇ ಆಗಿರುತ್ತಾರೆ. ಅಲ್ಲಿ ಅವರ ಅಂತಸ್ತು ಅತ್ಯುನ್ನತವಾದುದಾಗಿರುತ್ತದೆ. ಅವರು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನೀಡಬೇಕಾಗಿರುತ್ತದೆ ಹಾಗೂ ಅವರನ್ನು ಸಾಮಾಜೀಕರಣಗೊಳಿಸಬೇಕಾಗಿರುತ್ತದೆ. ಅದು ತುಂಬಾ ಗುರುತರವಾದ ಜವಾಬ್ದಾರಿಯಾಗಿರುತ್ತದೆ. ಶಿಕ್ಷಕ ಈ ಎಲ್ಲಾ ಜವಾಬ್ದಾರಿಗಳನ್ನು ಅರಿತು ವಿದ್ಯಾರ್ಥಿಗಳಲ್ಲಿ ಭಾರತೀಯತೆಯನ್ನು ಜಾಗೃತಗೊಳಿಸುವಲ್ಲಿ ಯಶಸ್ವಿಯಾಗಬೇಕೆಂಬುದೇ ಈ ವಿಚಾರಸಂಕಿರಣದ ಮೂಲ ಉದ್ದೇಶ.

"ಇಂದಿನ ಮಕ್ಕಳೇ ನಾಳಿನ ಪ್ರಜೆಗಳು". ಮನೆಯನ್ನು, ಸಮಾಜವನ್ನು, ದೇಶವನ್ನು ಕಟ್ಟುವ ನಾಯಕರು, ಮಾರ್ಗದರ್ಶಕರು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ದೇಶದ ನಾಳಿನ "ಎಲ್ಲಾ" ಆಗುವ ವಿದ್ಯಾರ್ಥಿಗಳಿಗೆ ಅರಿವನ್ನು ಮೂಡಿಸುವ ದೃಷ್ಟಿಯಿಂದ ಜ್ಞಾನವನ್ನು ಧಾರೆಯೆರೆವ ಶಿಕ್ಷಕನನ್ನು ಸಾರಥಿಯನ್ನಾಗಿ ನಿಲ್ಲಿಸಿದರೆ ರಥಚಲನೆ ಸಫಲವಾಗುತ್ತದೆ ಎಂಬ ನಂಬಿಕೆ.

ಈ ವಿಚಾರಗಳನ್ನು ರಾಮಚಂದ್ರಭಟ್ ಕೋಟೆಮನೆ, ಗುರುಕುಲಗಳ ಸಂಯೋಜಕರು, ವ್ಯಾಸ ವಿಶ್ವವಿದ್ಯಾಲಯದ ಉಪಕುಲಪತಿಗಳು ಮತ್ತು ಶಿಷ್ಯರು ತೈತ್ತರೀಯ ಉಪನಿಷತ್ತಿನ ಬ್ರಹ್ಮಾನಂದವಲ್ಲಿಯ ಆಧಾರಗಳ ಮೂಲಕ ದಿನಾಂಕ 06.05.2014 ರಿಂದ ದಿನಾಂಕ 08.05.2014 ರವರೆಗೆ ವೇದವಿಜ್ಞಾನ ಗುರುಕುಲಮ್, ಚೆನ್ನೇನಹಳ್ಳಿ, ಮಾಗಡಿ ಇಲ್ಲಿ ಶಿಕ್ಷಣ ಸಂಕುಲ ಕರ್ನಾಟಕದಿಂದ ಏರ್ಪಡಿಸಿದ್ದ "ಶಿಕ್ಷಣದಲ್ಲಿ ಭಾರತೀಯತೆ – ಪಂಚಸೂತ್ರೀ ಪಾಥೇಯ "ದ ಮುಂದುವರಿದ ಭಾಗವಾಗಿ ದಿನಾಂಕ 06.10.2014 ರಿಂದ 08.10.2014 ರವರೆಗೆ ಅಲ್ಲಿಯೇ ಅತ್ಯುತ್ತಮವಾದ ಶೈಕ್ಷಣಿಕ ವರ್ಗವನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ವಿದ್ಯಾರ್ಥಿ ಪರಿಷತ್, ವಿದ್ಯಾಭಾರತಿ, ಭಾರತೀಯ ಶಿಕ್ಷಣ ಮಂಡಳಿ, ಸಂಸ್ಕೃತ ಭಾರತಿಯಂತಹ ಶಿಕ್ಷಣ ಸಂಕುಲಗಳಿಂದ ಆಯ್ದ ಕೆಲವೇ ಜ್ಞಾನದಾಹಿ ಶಿಕ್ಷಕರಿಗೆ ಮಾತ್ರ ಈ ಶೈಕ್ಷಣಿಕ ವರ್ಗವನ್ನು ಏರ್ಪಡಿಸಲಾಗಿತ್ತು.

●

# ಸೋದರಿ ನಿವೇದಿತ



ಮಾರ್ಗರೆಟ್ ಎಲಿಜಬೆತ್ ನೋಬಲ್ ಎಂಬ ಸ್ಕಾಟಿಶ್– ಐರಿಶ್ ಮಹಿಳೆ ಸಮಾಜಸೇವಾಕಾರ್ಯಕರ್ತೆ, ಲೇಖಕಿ, ಶಿಕ್ಷಕಿ. ಸ್ವಾಮಿ ವಿವೇಕಾನಂದರ ಶಿಷ್ಯೆಯಾಗಿ ಸೋದರಿ ನಿವೇದಿತಾ ಎಂದೇ ಪರಿಚಿತೆಯಾಗಿ ತನ್ನ ಬದುಕಿನ ಸಾರ್ಥಕತೆಯನ್ನು ಭಾರತದಲ್ಲಿ ಕಂಡುಕೊಂಡ ವಿಶಿಷ್ಟ ವ್ಯಕ್ತಿತ್ವದ ಮಹಿಳೆ. ಮಹಿಳೆಯ ಕ್ರಿಯಾಶೀಲತೆಗೆ ಒಂದು ಉತ್ತಮ ನಿದರ್ಶನವೇ ಇಲ್ಲಿದೆ.

ತಂದೆಯಿಂದ, ನಂತರ ಕಾಲೇಜು ದಿನಗಳಲ್ಲಿ ಶಿಕ್ಷಕರಿಂದ ಈಕೆ ಮುಖ್ಯವಾಗಿ ಕಲಿತದ್ದು 'ಭಗವಂತನ ಸೇವೆಯೆಂದರೆ ಜನಸೇವೆ' ಎಂಬ ಪಾಠ. 1895ರಲ್ಲಿ ಲಂಡನ್ನಿನಲ್ಲಿ ಸ್ವಾಮಿ ವಿವೇಕಾನಂದರ ಭೇಟಿಯಾದದ್ದೇ ಅವರಿಂದ ಪ್ರಭಾವಿತರಾಗಿ ಅವರ ಶಿಷ್ಯೆಯಾಗಿ, ಭಾರತೀಯ ಸಂಸ್ಕೃತಿಯತ್ತ ಆಕರ್ಷಿತಳಾಗಿ 1898 ರಲ್ಲಿ ಬಂದು ತಲುಪಿದ್ದು ಕೋಲ್ಕತ್ತ ನಗರವನ್ನು . ಆಕೆಯಲ್ಲಿನ ಉದಾತ್ತವಾದ ಸೇವಾ ಭಾವವನ್ನು ಗುರುತಿಸಿದ ವಿವೇಕಾನಂದರು ತನ್ನನ್ನು ತಾನು ಭಗವಂತನಿಗೆ ಅರ್ಪಿಸಿಕೊಂಡವಳು ಎಂಬ ಅರ್ಥವನ್ನು ಸ್ಫುರಿಸುವ ' ನಿವೇದಿತಾ' ಎಂಬ ನಾಮಧೇಯವನ್ನು ನೀಡಿದ್ದರು.

ಕಲ್ಕತ್ತದ 'ಬಾಗ್‌ಬಜಾರ್' ಎಂಬ ಪ್ರದೇಶದಲ್ಲಿ ಈಕೆ ಹೆಣ್ಣುಮಕ್ಕಳಿಗಾಗಿ ಒಂದು ಶಾಲೆಯನ್ನು ಪ್ರಾರಂಭಿಸಿದರು. ಮೂಲಭೂತ ಶಿಕ್ಷಣವನ್ನು ಪಡೆಯಲಾಗದ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬುದೇ ಈಕೆಯ ಧ್ಯೇಯವಾಗಿತ್ತು. ಮಾತೆ ಶಾರದಾದೇವಿಯೊಂದಿಗೆ ಆತ್ಮೀಯ ಸಂಪರ್ಕವಿದ್ದ ಈಕೆ ಶಾಲೆಯ ಪ್ರಾರಂಭೋತ್ಸವವನ್ನು ಅವರಿಂದಲೇ ನೆರವೇರಿಸಿದ್ದರು. ಮಾತೆ ಶಾರದಾದೇವಿಗೆ ಕೂಡ ಹೆಣ್ಣುಮಕ್ಕಳು ಸುಶಿಕ್ಷಿತ ರಾಗಬೇಕೆಂಬ ವಿಚಾರದಲ್ಲಿ ಸಹಮತವಿತ್ತು. ಪಾಲಕರ ಮನವೊಲಿಸಿ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಒಪ್ಪಿಸಲು ನಿವೇದಿತಾ ಮನೆಮನೆಯ ಬಾಗಿಲು ತಟ್ಟಿದ್ದರು. ಅಕ್ಷರ ಕಲಿಕೆಯೊಂದಿಗೆ ಹೊಲಿಗೆ, ಆರೋಗ್ಯದ ಪಾಠ ಕೂಡ ಕಲಿಯುವ ಅವಕಾಶ ಅಲ್ಲಿರುತ್ತಿತ್ತು. ನಿವೇದಿತಾ ಲೇಖನಗಳನ್ನು ಬರೆಯುವ ಮೂಲಕ, ಉಪನ್ಯಾಸಗಳನ್ನು ನೀಡುವ ಮೂಲಕ ಹಣ ಸಂಪಾದಿಸಿ ಶಾಲೆ ನಡೆಸುತ್ತಿದ್ದರು. ಒಟ್ಟಾರೆ ಭಾರತೀಯ ಸಾಮಾನ್ಯ ಮಹಿಳೆಯ ಜೀವನ ಶೈಲಿಯನ್ನು ಸುಧಾರಿಸಲು ಶ್ರಮಿಸಿದ್ದರು. 'ಶಾರದಾಮಾತೆಯ ಬಗೆಗೆ ಆಕೆಗಿದ್ದ ಪೂಜ್ಯಭಾವ ಆಕೆಯೇ ಅವರಿಗೆ ಬರೆದಿದ್ದ ಪತ್ರವೊಂದರಲ್ಲಿ ವ್ಯಕ್ತವಾಗಿದೆ. 'ನೀವು ಭಗವಂತನ ಸೃಷ್ಟಿಯ ಅದ್ಭುತಗಳಲ್ಲಿ ಒಂದು. ಜಗತ್ತಿನ ಬಹುತೇಕ ಅದ್ಭುತಗಳೆಲ್ಲವೂ ಶಾಂತವೂ, ಸ್ಥಿರವೂ ಆಗಿದ್ದು, ನಮಗೇ ತಿಳಿಯದಂತೆ ನಮ್ಮ ಬದುಕನ್ನು ಆವರಿಸಿಕೊಂಡಿದೆ. ಗಾಳಿ, ಬೆಳಕು, ಗಂಗೆ, ಸುಂದರ ಹೂತೋಟ – ಹೀಗೆ ಎಲ್ಲವೂ ನಿಮ್ಮಂತೆ ಶಾಂತವಾಗಿರುತ್ತವೆ'

– ಸಹನಾ

➢ ಪುಟ 6 ರಿಂದ..... ವಲ್ಲಭಾಯಿ ಪಟೇಲ್

ಹೈದರಾಬಾದಿನಲ್ಲಿ ಹಿಂದೂಗಳ ಮಾರಣಹೋಮ ಆಗುತ್ತಿದೆ. ಸಾವಿರಾರು ಹಿಂದೂಗಳನ್ನು ರಜಾಕಾರರು ಕೊಲ್ಲುತ್ತಿದ್ದಾರೆ. ತಾವು ಏನೂ ಕ್ರಮ ತೆಗೆದುಕೊಳ್ಳದಿದ್ದರೆ ಹೇಗೆ? ಇದನ್ನು ನೋಡಿ ಸಂಕಟವಾಗುತ್ತದೆ'. ಪಟೇಲರು ಅದನ್ನು ಕೇಳಿ ನಗುಮುಖದಿಂದ ತಲೆಅಲ್ಲಾಡಿಸಿ ಒಳಗೆ ಹೊರಟುಹೋಗಿದ್ದರು. ಅವರ ಆ ಚರ್ಯೆಯ ಅರ್ಥ ನಂತರ ಗೊತ್ತಾಯಿತು. ಹಿಂದಿನ ರಾತ್ರಿಯೇ ಭಾರತೀಯ ಪಡೆ ಹೈದರಾಬಾದಿನ ರಾಜ್ಯದೊಳಗೆ 50 ಮೈಲಿ ಪ್ರವೇಶಿಸಿತ್ತು. ಮಾತನಾಡದೇ ಕೆಲಸ ಮಾಡುತ್ತಿದ್ದ ವ್ಯಕ್ತಿ ಪಟೇಲ್.

## ಪಟೇಲ್ ಕಾರ್ಯದಕ್ಷತೆ ಚಾಣಾಕ್ಷತನ

ಲಕ್ನೋದಲ್ಲಿನ ಮುಸ್ಲಿಂಲೀಗ್‌ಗೆ ಬಹು ದೊಡ್ಡನಾಯಕ ಕಾಲೇಕುಲ್ ಜಮಾನ್ ಎಂಬಾತ. ಅವನು ಲಕ್ನೋದಿಂದ ದೆಹಲಿಗೆ ಬರಬೇಕಾಗಿತ್ತು. ಇಡೀ ದೇಶದಲ್ಲಿ ಮುಸ್ಲಿಂ ಆಡಳಿತ ತರಬೇಕೆಂಬ ಅಪೇಕ್ಷೆ ಅವನದು. ಅದಕ್ಕಾಗಿ ಹಾಕಿದ್ದ ಯೋಜನೆ ಹೀಗಿತ್ತು. ಸುಮಾರು ಎಂಟು– ಹತ್ತು ಸಾವಿರ ರಜಾಕಾರರ ಗುಂಪು ದೆಹಲಿಯಲ್ಲಿ ಅಲ್ಲಲ್ಲಿ ಶಿಬಿರ ಹಾಕುವುದು, ಬೆಳಕು ಹರಿಯುವಷ್ಟರಲ್ಲಿ ಎಲ್ಲ ದೊಡ್ಡ ನಾಯಕರನ್ನು ಕೊಂದುಹಾಕಿ ಮುಸ್ಲಿಂ ಆಡಳಿತವನ್ನು ತರುವುದು. ಆಗ ಇಡೀ ದೇಶ ಸ್ವಾಧೀನಕ್ಕೆ ಬರುತ್ತದೆ. ಇದು ಪಟೇಲರಿಗೆ ತಿಳಿಯಿತು. ಅವರು ತೀನ್‌ಮೂರ್ತಿ ಭವನದ ಸುತ್ತ ಮಿಲಿಟರಿ ಹಾಕಿದರು. ಟೆಲಿಫೋನ್ ಸಂಪರ್ಕ ತೆಗೆಸಿದರು. ಹೊರಗಿನ ಬಾಗಿಲಿಗೆ ಬೀಗ ಹಾಕಿಸಿದರು. ಎಲ್ಲೆಲ್ಲಿ ಈ ಉಗ್ರಗಾಮಿಗಳು ಇದ್ದರೋ ಆ ಜಾಗಗಳನ್ನೆಲ್ಲ ಪತ್ತೆಮಾಡಿ ರಾತ್ರೋರಾತ್ರಿ ಎಲ್ಲರನ್ನೂ ಮುಗಿಸಿಬಿಟ್ಟರು. ಬೆಳಗಾಗುವಷ್ಟರಲ್ಲಿ ಅಂತಹ ಒಂದೇಒಂದು ವ್ಯಕ್ತಿಯೂ ದೆಹಲಿಯಲ್ಲಿರಲಿಲ್ಲ. ವಿಷಯ ತಿಳಿದ ಕಾಲೇಕುರ್ ಜಮಾನ್ ದೆಹಲಿಗೆ ಬರುವ ಯೋಚನೆ ಬಿಟ್ಟು ಸೀದಾ ಕರಾಚಿಗೆ ಹಾರಿದ್ದ.

ಪಟೇಲ್ ಆಡಳಿತ, ಆಲೋಚನಾ ಧಾಟಿ, ಕಾರ್ಯವಿಧಾನ ಎಲ್ಲವೂ ವಿಭಿನ್ನ, ವಿಶಿಷ್ಟ. ಕೈಗೊಳ್ಳುತ್ತಿದ್ದ ನಿರ್ಧಾರಗಳು ತುಂಬಾ ದೂರಾಲೋಚನೆಯಿಂದ ಕೂಡಿರುತ್ತಿದ್ದವು.

1947 ರ ಸಮಯ, ಸ್ವಾತಂತ್ರ್ಯ ಇನ್ನೇನು ಬಂದೇ ಹೋಯಿತು ಎನ್ನುವ ಹಾಗಿದ್ದ ಕಾಲ. ಲಕ್ಷಾಂತರ ನಿರಾಶ್ರಿತರು ದೆಹಲಿಯ ಹಾದಿಬೀದಿಗಳಲ್ಲಿ ಓಡಾಡುತ್ತಿದ್ದರು. ನೆಹರೂ ಒಂದು ಬೀದಿಯಲ್ಲಿ ಹೊರಟಿದ್ದಾಗ ಒಂದು ಹೆಣ್ಣುಮಗು ಹರಕಲು ಬಟ್ಟೆ ಹಾಕಿಕೊಂಡು ಅಳುತ್ತಾ ಹೋಗುತ್ತಿತ್ತಂತೆ. ನೆಹರೂಗೆ ತುಂಬಾ ಸಂಕಟವಾಗಿ ಆ ಬಾಲಕಿಯನ್ನು ಕರೆದು ಕಾರಲ್ಲಿ ಕೂರಿಸಿಕೊಂಡು ಮನೆಗೆ ಹೋಗಿ ಊಟ ಬಟ್ಟೆ ಎಲ್ಲಾ ಕೊಡಿಸಿ ಕಳುಹಿಸಿದರಂತೆ. ಅದೇ ರೀತಿ ಮತ್ತೊಂದು ರಸ್ತೆಯಲ್ಲಿ ಹಾದುಹೋಗುತ್ತಿದ್ದ ಪಟೇಲ್ ಕಣ್ಣಿಗೂ ಅಂತಹುದೇ ದೃಶ್ಯ ಎದುರಾಗಿತ್ತು. ಅದು ಒಂದೆಡೆಯಲ್ಲ, ಎಲ್ಲೆಲ್ಲೂ ಅದೇ ದೃಶ್ಯ. ಪಟೇಲ್ ಒಬ್ಬರನ್ನೂ ಮಾತಾಡಿಸಲಿಲ್ಲ. ನೇರ ಅವರ ಕಛೇರಿಗೆ ಹೋಗಿ ಸೈನ್ಯದ ಕಮಾಂಡೆಂಟ್ ಕರೆದು 'ನಾಳೆ ಬೆಳಗ್ಗೆ ಒಳಗೆ ಹತ್ತು ಸಾವಿರವಿರಲಿ, ಇಪ್ಪತ್ತು ಸಾವಿರವಿರಲಿ, ಅಗತ್ಯವಿದ್ದಷ್ಟು ಟೆಂಟುಗಳನ್ನು ಹಾಕಿ, ಆ ಅನಾಥರೆಲ್ಲರ ತಲೆಯ ಮೇಲೆ ನೆರಳಿರಬೇಕು ಪ್ರತಿಯೊಬ್ಬರಿಗೂ ಆಹಾರ ಒದಗಿಸಬೇಕು. ನಾಳೆ 10 ಗಂಟೆಯೊಳಗೆ ನನಗೆ ಇದರ ವರದಿ ಬೇಕು ಎಂದು ಆದೇಶಿಸಿದ್ದರು.

ಇದು ಪಟೇಲ್ ಕೆಲಸಮಾಡುತ್ತಿದ್ದ, ಮಾಡಿಸುತ್ತಿದ್ದ ರೀತಿ.

ರಾಜಮಹಾರಾಜ ಸಾಮಂತರುಗಳಿಂದ ತುಂಬಿದ್ದ ಬ್ರಿಟೀಷ್ ಇಂಡಿಯಾವನ್ನು ಭಾರತವನ್ನಾಗಿಸಿದರು. ಸಾಮ, ದಾನ, ಭೇದ, ದಂಡ ಇವುಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿದ ಹಿರಿಮೆ ಪಟೇಲರದ್ದು.

ಭಾರತದ ಇತಿಹಾಸದಲ್ಲಿ ವಿಶಿಷ್ಟ ವ್ಯಕ್ತಿತ್ವದ ರಾಜಕೀಯ ನಾಯಕ ಸರ್ದಾರ್ ವಲ್ಲಭ ಬಾಯ್‌ಪಟೇಲರನ್ನು ಅವರ ಸರಳ ವ್ಯಕ್ತಿತ್ವ ಹಾಗೂ ರಾಜಕೀಯ ಮುತ್ಸದ್ದಿತನ ಮತ್ತು ರಾಷ್ಟ್ರಪ್ರೇಮ, ನಿಷ್ಠೆಗೆ ಬದ್ಧವಾಗಿ ನಡೆಸುತ್ತಿದ್ದ ಕಾರ್ಯದಕ್ಷತೆ ಎಂಬೆಲ್ಲಾ ಗುಣಗಳೊಂದಿಗೆ ಸ್ಮರಿಸಬೇಕು.

ಅಕ್ಟೋಬರ್ 31 1875 ರಂದು ಗುಜರಾತಿನ ನಡಿಯಾದ್ ಎಂಬಲ್ಲಿ ಜನಿಸಿದ ಪಟೇಲರು ಡಿಸೆಂಬರ್ 5, 1950ರಂದು ನಿಧನರಾದರು. ಇವರಿಗೆ 1991ರಲ್ಲಿ 'ಭಾರತರತ್ನ' ಪ್ರಶಸ್ತಿಯ ಗೌರವವನ್ನು ನೀಡಲಾಯಿತು.

ಇಂತಹ ಆದರ್ಶ ವ್ಯಕ್ತಿಗಳ ಪರಿಚಯವನ್ನು ಯುವಜನಾಂಗಕ್ಕೆ ಪರಿಚಯಿಸುವ ಸತ್ಸಂಪ್ರದಾಯ ಶಾಲಾ ಶಿಕ್ಷಣದ ಪಠ್ಯಗಳಲ್ಲಿರುವುದು ಮೊದಲಿಗೆ ಕಡ್ಡಾಯವಾಗಿರುತ್ತಿತ್ತು. ಈಗಲೂ ಅಗತ್ಯವಲ್ಲವೇ? ●

# ನಮ್ಮ ಶಿಕ್ಷಣ ಕನ್ನಡದಲ್ಲಿ

**ಬಾಲ್ಯ ಕಳೆಯುವ ತನಕವಾದರೂ, ಅಂದರೆ ಎಸ್.ಎಸ್.ಎಲ್.ಸಿ. ಕಳೆಯುವವರೆಗಾದರೂ ಪರಿಸರದ ಭಾಷೆಯ ಮೂಲಕ ಬೆಳೆಯದಿದ್ದರೆ, ಭಾವೀ ಜೀವನದಲ್ಲಿ ಆ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಿಲ್ಲ. ಎಸ್.ಎಸ್.ಎಲ್.ಸಿ. ಮುಗಿಯುವವರೆಗಾದರೂ ಕರ್ನಾಟಕದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು. –ಡಾ. ಎಸ್. ಎಲ್. ಭೈರಪ್ಪ**

**ಕರ್ನಾಟಕದಲ್ಲಿ ಇರುವವರೆಲ್ಲರಿಗೂ ಕನ್ನಡದಲ್ಲಿ ಓದುವುದು, ಬರೆಯುವುದು, ಮಾತನಾಡುವುದು ಚೆನ್ನಾಗಿ ಬರಬೇಕು. ಇದು ಅತ್ಯಂತ ಅಗತ್ಯ. – ಜಿ. ಪಿ. ರಾಜರತ್ನಂ**

**ನಮ್ಮ ನಮ್ಮ ಭಾಷೆಯ ವಿಷಯದಲ್ಲಿ ನಿರಭಿಮಾನ ಸಲ್ಲದು. – ಪ್ರೊ. ರಂ. ಶ್ರೀ ಮುಗಳಿ**

**ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ ಬಾಯ್ ಒಲಿಸಾಕಿದ್ರೂನೆ ಮೂಗ್ನಲ್ ಕನ್ನಡ್ ಪದವಾಡ್ತೀನಿ – ಜಿ.ಪಿ.ರಾಜರತ್ನಂ**

# ವಿದ್ಯಾರ್ಥಿ ಮಿತ್ರ – 13




## 1. ರಸಪ್ರಶ್ನೆ

1. "ಕರ್ನಾಟಕ" ಎನ್ನುವ ಪದ ಮಹಾಭಾರತದ ಯಾವ ಪರ್ವದಲ್ಲಿದೆ?
2. ನಮ್ಮ ರಾಜ್ಯ ಏಕೀಕರಣವಾದ ವರ್ಷಯಾವುದು ? ಹಾಗೆ ಮೊದಲು ಯಾವ ಹೆಸರು ಪಡೆಯಿತು?
3. ನಮ್ಮ ರಾಜ್ಯಕ್ಕೆ "ಕರ್ನಾಟಕ" ಎಂದು ನಾಮಕರಣವಾಗಿದ್ದು ಯಾವಾಗ?
4. ಕರ್ನಾಟಕದ ಕೃಷ್ಣರಾಜಸಾಗರ ಯಾವ ಜಿಲ್ಲೆಯಲ್ಲಿದೆ?
5. ಕರ್ನಾಟಕದ ಯಾವ ಜಿಲ್ಲೆಗೆ ರೈಲು ಸಂಪರ್ಕವಿಲ್ಲ?
6. ಕರ್ನಾಟಕದ ಶಾಸನಗಳನ್ನು ಸಂಗ್ರಹಿಸಿರುವ ಇವರಿಗೆ "ಶಾಸನಗಳ ಪಿತಾಮಹ" ಎನ್ನುತ್ತಾರೆ. ಇವರಾರು?
7. ಏಷ್ಯದಲ್ಲೆ ಪ್ರಥಮ ಜಲವಿದ್ಯುತ್ ಕೇಂದ್ರವನ್ನು ಯಾರು,ಎಲ್ಲಿ ಮತ್ತು ಯಾವಾಗ ಆರಂಭಿಸಿದರು?
8. ಕರ್ನಾಟಕದ ಸಂಪೂರ್ಣ ಸಾಕ್ಷರ ಜಿಲ್ಲೆ ಯಾವುದು?
9. "ಎಜುಸ್ಯಾಟ್" ಶಿಕ್ಷ್ಣಣ ಕ್ಷೇತ್ರಕ್ಕಾಗೆ ಹಾರಿಬಿಟ್ಟ ಉಪಗ್ರಹ. ಇದರ ಉಪಯೋಗ ಪಡೆದ ದೇಶದ ಮೊದಲ ಊರು ಕರ್ನಾಟಕದಲ್ಲಿದೆ ಅದು ಯಾವುದು ?
10. 101 ದೇವಾಸ್ಥಾನ, 101 ಕಲ್ಯಾಣಿ ಇರುವ, 1013 ಅಡಿ ಸಮುದ್ರ ಮಟ್ಟದಿಂದ ಎತ್ತರವಿರುವ ಊರು ಯಾವುದು?
11. ಕರ್ನಾಟಕದಲ್ಲಿ ಅತ್ಯಂತ ದೊಡ್ಡ ತಾಮ್ರದ ಗಣಿ ಎಲ್ಲಿದೆ?
12. ಕರ್ನಾಟಕದ ಅತಿ ದೊಡ್ಡದಾದ ಕಬ್ಬಿಣ ನಿಕ್ಷೇಪ ಎಲ್ಲಿದೆ?
13. ಕರ್ನಾಟಕದ ದೊಡ್ಡ ದೇವಾಲಯ ಎಲ್ಲಿದೆ?
14. ಕರ್ನಾಟಕದ ಗಾಂಧಿ ಯಾರು?
15. ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರ ತರುವ ಪತ್ರಿಕೆ ಹೆಸರೇನು?
16. "ದೇವಾಲಯಗಳ ಚಕ್ರವರ್ತಿ" ಎಂದು ಕರೆಸಿಕೊಳ್ಳುವ ದೇವಾಲಯ ಯಾವುದು?
17. ಆಕಾಶವಾಣಿಯ ಮೂಲಕ ಮೊದಲು ಮಾತನಾಡಿದ ಕನ್ನಡಿಗ ಯಾರು?
18. ಭಾರತೀಯ ಸಂವಿಧಾನ ಬರೆಯುವಾಗ ಇದ್ದ ಕನ್ನಡಿಗ ಯಾರು?
19. ಕರ್ನಾಟಕದಲ್ಲಿರುವ ಏಕೈಕ "ದಂತ ಸಿಂಹಾಸನ" ಎಲ್ಲಿದೆ?
20. ಕರ್ನಾಟಕದ "ಗಿರಿಧಾಮಗಳ ರಾಣಿ" ಯಾವುದು?
21. "ನವಿಲು ತೀರ್ಥ ಅಣ್ಣೆಕಟ್ಟು" ಯಾವ ನದಿಗೆ ಕಟ್ಟಲಾಗಿದೆ?
22. ಕಿಶನ್ ಘಾಟ್ ನಲ್ಲಿ ಯಾರ ಸ್ಮಾರಕವಿದೆ ?
23. ನಂಜನಗೂಡಿಗಿರುವ ಹಳೆಯ ಹೆಸರೇನು?
24. ಜಯಂತಿ, ವೈಜಯಂತಿಪುರ ಎಂದು ಹೆಸರಿದ್ದ ಐತಿಹಾಸಿಕ ನಗರದ ಈಗಿನ ಹೆಸರೇನು?
25. ಚಂದ್ರಗುಪ್ತ ಮೌರ್ಯ ತನ್ನ ಕೊನೆಯ ದಿನಗಳನ್ನು ಕಳೆದ ಸ್ಥಳ ಕರ್ನಾಟಕದಲ್ಲಿ ಎಲ್ಲಿ?

## 2. ಇವುಗಳು ಯಾವ ರಾಜ್ಯದ ಸಾಂಪ್ರದಾಯಿಕ ಉಡುಪುಗಳು ?










## ವಿದ್ಯಾರ್ಥಿ ಮಿತ್ರ – 12 ರ ಉತ್ತರ

**1. ರಸಪ್ರಶ್ನೆ** : 1) ದೆಹಲಿ, 2) ಸರಯೂ (ಉತ್ತರ ಪ್ರದೇಶ), 3) ವಿಜ್ಞಾನೇಶ್ವರ, 4) ಡಿಸೆಂಬರ್ 25–2001, 5) ಅರವಿಂದ ಮಾಲಗತ್ತಿ , 6) ನಿಜಗುಣ ಶಿವಯೋಗಿ, 7) ನೀರುಗುದರೆ, 8) ಯೆನ್, 9) ವಾರಣಾಸಿ (ಉತ್ತರ ಪ್ರದೇಶ), 10) ಎ. ಜಿ. ಭೀಮರಾವ್, 11) ಆಗಸ್ಟ್ 1996, 12) ಬಳ್ಳಾರಿ, 13) ರಾಯಚೂರು, 14) 6 ಏಪ್ರಿಲ್ – 1948, 15) ಎಲ್. ಬಸವರಾಜು, 16) ಅಗರತಲಾ, 17) ಪುಣೆ, 18) ರಾಜಸ್ಥಾನ, 19) 1999, 20) ಅಮೆರಿಕನ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ

**2. ಊರುಗಳ ಹೆಸರುಗಳು :** 1) ಸೋಮನಾಥಪುರ ; 2) ತಲಕಾಡು ; 3) ಬಿಜಾಪುರ ; 4) ಪಟ್ಟದಕಲು

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಸಾಧಕರನ್ನು ಸ್ಮರಿಸೋಣ

ಭಾರತವನ್ನು ಬಹುರತ್ನ ಪ್ರಸವೀ ಎಂದು ಕರೆಯುತ್ತಾರೆ. ಈ ಭೂಮಿಯಲ್ಲಿ ಜನ್ಮ ತಳೆದ ಮಹಾಪುರುಷರು ಅಗಣಿತ. ಇವರಲ್ಲಿ ದಾರ್ಶನಿಕರು, ಕವಿ, ಸಾಹಿತಿಗಳು, ವಿಜ್ಞಾನಿಗಳು ಸ್ವಾತಂತ್ರ್ಯ ಹೋರಾಟಗಾರರು ಹೀಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಇದ್ದಾರೆ. ನಮ್ಮ ಜೀವನ ಪಥ ಹೇಗಿರಬೇಕೆಂಬುದಕ್ಕೆ ಇವರೆಲ್ಲಾ ಮಾರ್ಗದರ್ಶಕರು. ಇಂಥವರ ಜೀವನವನ್ನು ನಾವು ತಿಳಿಯುವುದಲ್ಲದೆ, ನಮ್ಮ ಮಕ್ಕಳಿಗೂ ತಿಳಿಸುವುದು ತುಂಬಾ ಅಗತ್ಯ. ಇವರ ಜೀವನದಿಂದ ಪ್ರೇರಣೆ ಪಡೆದು, ಅದೆಷ್ಟೋ ವಿದ್ಯಾರ್ಥಿಗಳು ಇವರಂತೆ ಆದರೆ ನಮ್ಮ ಶಿಕ್ಷಕ ಜೀವನವು ಸಾರ್ಥಕವಾದೀತು. ಬನ್ನಿ ಈ ಕಾರ್ತಿಕ ಹಾಗೂ ಮಾರ್ಗಶಿರಮಾಸಗಳಲ್ಲಿ ಜನ್ಮ ತಳೆದ ಸಾಧಕರನ್ನು ಸ್ಮರಿಸೋಣ.

ಈ ವರ್ಷ ನವೆಂಬರ್ 4 ಉತ್ಥಾನದ್ವಾದಶಿ. ಈ ಪುಣ್ಯದಿನದಂದು 1845ರಲ್ಲಿ ಮಹಾರಾಷ್ಟ್ರದ ಕೋಲಬಾ ಜಿಲ್ಲೆಯಲ್ಲಿ **ವಾಸುದೇವ ಬಲವಂತ ಫಡಕೆ** ಜನಿಸಿದರು. ಬ್ರಿಟಿಷರನ್ನು ಭಾರತದಿಂದ ಓಡಿಸಬೇಕೆಂದು ಶಸ್ತ್ರಕ್ರಾಂತಿ ಮಾಡಿದ ಮೊದಲನೇ ಕ್ರಾಂತಿಕಾರಿ. ರಾಮೋಶಿ ಎಂಬ ದಲಿತರನ್ನು ಸಂಘಟಿಸಿ ಬ್ರಿಟಿಷ್ ಸರ್ಕಾರವನ್ನು ನಡುಗಿಸಿದ ವೀರ. 1879ರಲ್ಲಿ ಬಂಧಿತನಾದಾಗ, ಭಾರತದ ಹಿಡಿ ಮಣ್ಣನ್ನು ಕಟ್ಟಿಕೊಂಡು ಏಡನ್‌ನ ಜೈಲಿನಲ್ಲಿ ಬಂಧಿಯಾಗಿ ನಿತ್ಯ ತಾಯ್ನಾಡಿಗೆ ನಮಸ್ಕರಿಸುತ್ತಿದ್ದ ಮಹಾನ್ ದೇಶಭಕ್ತ. 1883ರ ಫೆಬ್ರವರಿ 17 ರಂದು ಫಡ್ಕೆ ನಿಧನ ಹೊಂದಿದಾಗ ಅವನ ಬಲಗೈ ಮುಷ್ಠಿಯಲ್ಲಿ ಭಾರತದ ಹಿಡಿ ಮಣ್ಣಿನ ಗಂಟಿತ್ತು.

**ಗುರುನಾನಕ್** ಹುಟ್ಟಿದ್ದು 1469 ನವೆಂಬರ್ 6 ರಂದು ಪಂಜಾಬಿನ ಹಳ್ಳಿ ತಲ್ವಂಡಿಯಲ್ಲಿ, ಸಿಖ್ ಮತಸ್ಥಾಪಕ. ಎಲ್ಲರೂ ಓರ್ವನೇ ದೇವರ ಮಕ್ಕಳು ಆದ್ದರಿಂದ ಅಣ್ಣ ತಮ್ಮಂದಿರು ಎಂಬ ಭ್ರಾತೃತ್ವದ ತತ್ವವನ್ನು ಸಾರಿ ಆಚರಿಸಿ ಮೇಲ್ಪಂಕ್ತಿ ಹಾಕಿದ ಸಂತ. ಇಡೀ ದೇಶವನ್ನು ಕಾಲ್ನಡಿಗೆಯಲ್ಲಿ ಸಂಚರಿಸಿ ಏಕ ದೇಶಭಾವ ಮೂಡಿಸಿದರು. ಕರ್ನಾಟಕದ ಬೀದರ್‌ಗೂ ಬಂದಿದ್ದರು. ಅಲ್ಲಿ ಅವರು ತಂಗಿದ್ದ ಸ್ಥಳ ನಾನಕ್‌ಝರಾ ಎಂದು ಪ್ರಸಿದ್ಧವಾಗಿದೆ.

ನವಂಬರ್‌ನಲ್ಲಿ ಜನಿಸಿದ ಇನ್ನಿತರ ಸಾಧಕರೆಂದರೆ

- ಖ್ಯಾತ ವಿಜ್ಞಾನಿ ನೋಬಲ್ ವಿಜೇತ ಸರ್. ಸಿ.ವಿ ರಾಮನ್ –07–11–1888
- ಕುಲದಲ್ಲಿ ಆಚಾರ ಶ್ರೇಷ್ಠ ಎಂದು ಸಾರಿದ ದಾಸ ವರೇಣ್ಯ ಕನಕದಾಸರು –09–11–1494.
- ಖ್ಯಾತ ಪತ್ರಕರ್ತ ಮೊಹರೆ ಹನುಮಂತರಾಯರು – ನವೆಂಬರ್ 12
- ಪ್ರಥಮ ಪ್ರಧಾನಿ ಪಂಡಿತ್ ನೆಹರೂ –14–11–1889
- ಖ್ಯಾತ ವಾಗ್ಗೇಯಕಾರ ಮುತ್ತಯ್ಯ ಭಾಗವತರ್ –15–11–1887
- ಝಾನ್ಸಿರಾಣಿ ಲಕ್ಷ್ಮಿಬಾಯಿ –19–11–1828
- ಬೆಂಗಳೂರು ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಸ್ಥಾಪನೆಗೆ ಅಡಿಗಲ್ಲು ಹಾಕಿದ ಖ್ಯಾತ ಉದ್ಯಮಿ ವಾಲ್‌ಚಂದ್ ಹೀರಾ ಚಂದ್ – 23–11–1882.
- ಕನ್ನಡದ ಖ್ಯಾತ ಭಾಷಾಶಾಸ್ತ್ರಜ್ಞ ತೀ.ನಂ ಶ್ರೀಕಂಠಯ್ಯ 26–11–1906

**ಸುಬ್ರಮಣ್ಯ ಭಾರತಿ** ಹುಟ್ಟಿದ್ದು 11–12–1882 ತಮಿಳುನಾಡಿನ ಎಟ್ಟಾಯಪುರಂ ಎಂಬ ಸಣ್ಣ ಊರಿನಲ್ಲಿ. ಬಡತನದ ನಡುವೆಯೂ ದೇಶಕ್ಕಾಗಿ ಬದುಕು ಸವೆತ. ತನ್ನ ಲೇಖನದಿಂದ ಬ್ರಿಟಿಷ್ ಸರ್ಕಾರ ನಡುಗಿಸಿದ ಪತ್ರಿಕೋದ್ಯಮಿ. ಮಹಾನ್ ಕವಿ, ತನ್ನ ಲೇಖನಿಯಿಂದ ಜನ ಜಾಗೃತಿ ಮಾಡಿದ ಅಪ್ರತಿಮ ದೇಶಭಕ್ತ.

**ಶ್ರೀನಿವಾಸ ರಾಮಾನುಜಂ** 20 ನೇ ಶತಮಾನದ ಭಾರತೀಯ ಗಣಿತ ಪ್ರತಿಭೆ. ತಮಿಳುನಾಡಿನ ನಾಮಕ್ಕಲ್‌ನಲ್ಲಿ 22.11.1887ರಲ್ಲಿ ಜನನ. 13–14ರ ವಯಸ್ಸಿನಲ್ಲೇ ಕಾಲೇಜು ಗಣಿತವನ್ನು ಸಲೀಸಾಗಿ ಮಾಡುವ ಸಾಮರ್ಥ್ಯ. ಚೆನ್ನೈನ ಬಂದರು ಇಲಾಖೆಯಲ್ಲಿ ಕಾರಕೂನ ಕೆಲಸಮಾಡುತ್ತಿದ್ದರೂ ಪುಟಗಟ್ಟಲೆ ಗಣಿತದ ಸಮಸ್ಯೆಗಳನ್ನು ಬಿಡಿಸಿ ಇಂಗ್ಲೆಂಡಿನ ಗಣಿತಶಾಸ್ತ್ರಜ್ಞ ಜಿ.ಹೆಚ್ ಹಾರ್ಡಿಯಿಂದ ಸೈ ಎನ್ನಿಸಿಕೊಂಡ.

**ಪಂಡಿತ ಮದನಮೋಹನ ಮಾಲವೀಯ** ಹುಟ್ಟಿದ್ದು 1861 ಡಿಸೆಂಬರ್ 25.1884 ರಲ್ಲಿ, ಅಧ್ಯಾಪಕವೃತ್ತಿ ನಂತರ ವಕೀಲವೃತ್ತಿ. ಸ್ವದೇಶಿ ಚಳುವಳಿ ಮುಂದಾಳು. ಸ್ವದೇಶೀ ಶಿಕ್ಷಣ ನೀಡುವ ಸಲುವಾಗಿ ಕಾಶಿಯಲ್ಲಿ ಕಾಶಿ ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆಯ ಕನಸು. ಅದಕ್ಕಾಗಿ ಬಡವ ಬಲ್ಲಿದರಿಂದ ಧನಸಂಗ್ರಹ ಮಾಡಿ 1916ರಲ್ಲಿ ಅದರ ಪ್ರಾರಂಭ. ಅನೇಕ ವರ್ಷ ಅದರ ಕುಲಪತಿಗಳೂ ಆಗಿದ್ದರು.

**ಕುವೆಂಪು** 1904ರ ಡಿಸೆಂಬರ್ 29 ರಂದು ತೀರ್ಥಹಳ್ಳಿ ಸಮೀಪದ ಕುಗ್ರಾಮ ಕುಪ್ಪಳ್ಳಿಯಲ್ಲಿ ಜನನ. ಕನ್ನಡದ ರಾಷ್ಟ್ರಕವಿ, ನವೋದಯ ಸಾಹಿತ್ಯ ಕಾಲದ ಪ್ರಮುಖ ಕವಿ. ಕನ್ನಡಕ್ಕೆ ಮೊದಲಜ್ಞಾನಪೀಠ ಪ್ರಶಸ್ತಿದಕ್ಕಿದ್ದು ಇವರ ರಾಮಾಯಣದರ್ಶನದ ಮಹಾಕಾವ್ಯದಿಂದಾಗಿ ರಸ ಋಷಿ ಎಂದೇ ಹೆಸರಾದವರು. ಮಹಾನ್ ಮಾನವತಾವಾದಿ. ರಾಮಕೃಷ್ಣ ವಿವೇಕಾನಂದರ ಪರಮಭಕ್ತ.

**ಅಟಲ್‌ಬಿಹಾರಿ ವಾಜಪೇಯಿ** ಕವಿ ಹೃದಯದ ರಾಜಕಾರಣಿ. 25.12.1924 ರಂದು ಮಧ್ಯಪ್ರವೇಶದ ಗ್ವಾಲಿಯರ್ ನಲ್ಲಿ ಜನನ. 1998 ರಿಂದ 2004ರ ವರೆಗೆಮ ಭಾರತದ 11ನೇ ಪ್ರಧಾನಮಂತ್ರಿ. ಬಾಲ್ಯದಲ್ಲೇ ಆರ್.ಎಸ್.ಎಸ್ ನ ಸಂಪರ್ಕಕ್ಕೆ ಬಂದು ವಿದ್ಯಾಭ್ಯಾಸದ ನಂತರ ಪೂರ್ಣಾವಧಿ ಕಾರ್ಯಕರ್ತನಾಗಿ, 1951 ರಲ್ಲಿ ಭಾರತೀಯ ಜನಸಂಘದ ಸ್ಥಾಪನೆಯಾದ ನಂತರ ಅದರ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿ, ಪ್ರಖರವಾಗ್ಮಿಯೆಂದು ಜನರ ಮನ್ನಣೆ ಪಡೆದ ಭಾರತೀಯ ರಾಜಕಾರಣದ ದಿಗ್ಗಜ.

# ಚಿತ್ರ ಸುದ್ದಿ




ಬೆಳಗಾಂನಲ್ಲಿ ನಡೆದ ಶೈಕ್ಷಿಕ ಮಹಾಸಂಘದ ಸಭೆಯಲ್ಲಿ ಉಪಸ್ಥಿತರಿದ್ದವರು (ಎ–ಬ) ಡಾ॥ ಜೆ. ಪಿ. ಸಿಂಘಾಲ್, ಮಹೇಂದ್ರ ಕಪೂರ್, ಡಾ॥ ವಿಮಲ್ ಪ್ರಸಾದ್ ಅಗರ್‌ವಾಲ್, ಓಂಪಾಲ್ ಸಿಂಗ್, ಪ್ರೊ. ಕೆ. ಬಾಲಕೃಷ್ಣ ಭಟ್, ಪ್ರೊ. ಕೃ. ನರಹರಿ.




ರಾಷ್ಟ್ರೀಯ ಕಾರ್ಯಸಮಿತಿ : ಮಹಿಳಾ ಸಂವರ್ಗ ಕಾರ್ಯಕ್ರಮ
ಶ್ರೀಮತಿ ಪ್ರಿಯಂವದಾ ಸಕ್ಸೇನಾ, ಡಾ. ಜೆ. ಪಿ. ಸಿಂಘಾಲ್, ಡಾ. ವಿಮಲ್‌ಪ್ರಸಾದ್ ಅಗರ್‌ವಾಲ್, ಡಾ. ನಿರ್ಮಲಾ ಯಾದವ್, ಶ್ರೀಮತಿ ಆರ್. ಸೀತಾಲಕ್ಷ್ಮಿ



ಸಭೆಯಲ್ಲಿ ಪಾಲ್ಗೊಂಡಿದ್ದ ಪದಾಧಿಕಾರಿಗಳು

Registered No. RNI 45459/85
RNP/Ka/BGS-125/2012-14
Posted at Bangalore GPO
Bangalore -560 001

**NOVEMBER 2014**
Date of Posting
20th or 21st of every month

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com